"Service of the Poor is the Service of God"

ಬಡವರಬಂಧು

ಮಂಗಳೂರು.

BADAVARA BADNHU or THE FRIEND OF THE POOR MANGALORE.

A HIGH CLASS CANARESE MONTHLY.

ಪುಷ್ಪ ೨. ಎಸಳು ೧೦.

APRIL, 1934.

Editor:—Mangalore Jarappa. *Associate Editor:*—B. Narsappa.

ಸನ್ಯಾಸಿಯ ಲಕ್ಷಣ.

ಬಡವರ ಪಾಡನ್ನು ಕಂಡು ಕರುಬುವವನೇ ಮಹಾತ್ಮನು. ಅದರಿಂದ ಮನ ಕರಗದವನೇ ದುರಾತ್ಮನು. ನಾನು ಪುನಃ ಪುನಃ ಈ ಲೋಕದಲ್ಲಿ ಹುಟ್ಟಿ ಸಾವಿರಾರು ಕಷ್ಟಗಳಿಗೀಡಾದರೂ, ನಾನು ನಂಬಿರುವ ಓರ್ವನೇ ದೇವನನ್ನು, ಸರ್ವ ಆತ್ಮಗಳ ಆತ್ಮನನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲಾ ಜನಾಂಗ, ಜಾತಿಗಳ ದುಷ್ಟ, ದುಃಖಿತ, ದರಿದ್ರ ಜನರಲ್ಲಿರುವ ಏಕಮಾತ್ರನಾದ ದೇವರನ್ನು ಪೂಜಿಸುವಂತಾಗಲಿ! ಈ ಜನರೇ ನ[illegible] ವಿಶಿಷ್ಟ ಉದ್ದೇಶವಾಗಲಿ! ಇಷ್ಟೊಂದು ತಪಸ್ಸಿನ ಮೇಲೆ ಇದೀಗ ನಾನು ತಿಳಿದಿ[illegible]ವ ಪರಮ ಸತ್ಯ. ಪ್ರತಿಯೊಂದು ಜೀವಕೋಟಿಯಲ್ಲಿಯೂ ದೇವರಿರುವನು. ಅದರ ಹೊರತು ಬೇರೊಬ್ಬ ದೇವರಿಲ್ಲ. ಸಮಸ್ತ ಜೀವರಾಶಿಗಳ ಸೇವೆಯೇ ಬಡವರ ಸೇವೆ. ಇಂತಹ ದೀನ ದರಿದ್ರನಾರಾಯಣನ ಪೂಜೆಯು ಮಹಾತ್ಮನದು ಮಾತ್ರವಲ್ಲ—ಸನ್ಯಾಸಿಯ ಲಕ್ಷಣವೂ ಆಗಿದೆ.

ಸ್ವಾಮಿ ವಿವೇಕಾನಂದ.

ವಾರ್ಷಿಕ ಚಂದಾ—ಪರ ಊರವರಿಗೆ .... ರೂ. 1—4—0.

" " — ಊರವರಿಗೆ .... ರೂ. 1—0—0.

ಈ ಸಂಚಿಕೆಯ ಬೆಲೆ: 0—1—6.

ಬಡವರಬಂಧು

"Badavara Bandhu"

ಸಂಪುಟ 2. | ಎಪ್ರಿಲ್, 1934. | ಸಂಚಿಕೆ 10.

ಕೊಡಗಳ ತೆಗೆಯುಲಿಕ್ಕುಂಟೇ?*

ಕೊಡಗಳ ತೆಗೆಯುಲಿಕ್ಕುಂಟೇ ಬುದ್ಧಿ?

ಕೊಡಾ—ಕೊಡಾ—ಕೊಡಾೀ.

ಬಾವಿಯುದೆಷ್ಟೂ ಆಳವೆ ಇರಲಿ;
ಕೊಡಗಳು ಎಷ್ಟೂ ಅದರೊಳಗಿರಲಿ;
ಕಷ್ಟಕೆ ತಕ್ಕ ಕಾಸದು ಸಿಗಲಿ—
ಬಾವಿಗೆ ಇಳಿದು
ಕೊಡ ಮೇಲ್ ತರುವೆ ॥ ೧ ॥

ಕೆಲವರು ಕರೆದು ನೀರಿಗೆ ಇಳಿಸಿ,
ಕಾಸಿಗೆ ದಿನವಿಡಿ ಚರ್ಚೆಯ ಬೆಳಸಿ,
ಬಡವನ ಹೊಟ್ಟೆಗೆ ಹೊಡೆವುದೆ ಜಾಸ್ತಿ.
ಮಾಡುವುದೇನು?
ಬಾಳ್ವೆಯು ಗೋಳು! ॥ ೨ ॥

ಹಿಟ್ಟಿಗೆ ಬಟ್ಟೆಗೆ ದುಡಿವುದೆ ಕಷ್ಟ.
ಸಂಸಾರದ ಹೊರೆ ಹೊತ್ತರೆ ನಷ್ಟ.
ಬಡತನವಿದ್ದರೆ ಹೊಲೆಯನು ಮುಟ್ಟೆ.
ನೋಡುವರಿಲ್ಲ!
ನುಡಿಯುವರಿಲ್ಲ! ॥ ೩ ॥

ಚಿಲ್ಲರೆ ಕಾಸಿಗೆ ಮಾರುವೆ ಸೇವೆ.
ಕಷ್ಟವೊ ಸುಖವೊ—ನಾನೇನರಿವೆ?
ಹೆಂಡತಿ ಮಕ್ಕಳನೆಂತೂ ಪೊರೆವೆ!
ಇದುವೇ ಕಸುಬು—
ಇದರೊಳೆ ಜೀವನ. ॥ ೪ ॥

ಮೋಹನ.

*ಬಾವಿಗೆ ಬಿದ್ದ ಕೊಡಗಳನ್ನು ತೆಗೆಯುವ ಕಸಬು.

ಸಂ. ಬ. ಬ.

ಆ ದಿನ!

ಬರೆದವ:—"ಭಂಡಾರ"

ಹಬ್ಬದ ದಿನ. ನನ್ನಾಕೆ ಬಹಳ ಗೆಲವಿನಿಂದಿದ್ದಳು. ಮುಂಜಾನೆ ಎದ್ದು ನನಗೊಂದು ಲೋಟಾ ಕಾಫಿ, ಒಂದಿಷ್ಟು ಉಪ್ಪಿಟ್ಟು ಮಾಡಿ ಕೊಟ್ಟು, ಮನೆ ಕೆಲಸಕ್ಕೆ ಹೋದಳು. ಆ ಮೇಲೆ ನಾಡ ಮೇಲೆ ನಾಡು ಬಿದ್ದರೂ ಅವಳನ್ನು ಮಾತಾಡಿಸುವ ಧೈರ್ಯ ನನಗಿಲ್ಲ. "ಏನೇ?" ಎಂದು ಒಂದು ಶಬ್ದ, ನಾಲಿಗೆಯಿಂದ ಅಪ್ಪಿ ತಪ್ಪಿ ಬಂದದ್ದೇ ಆದರೆ—'ವರ್ಷಕ್ಕೊಂದು ದಿನ. ಬೇಗನೆ ಊಟಕ್ಕೆ ಸಿದ್ಧ ಪಡಿಸಿ, ಒಂದು ಘಳಿಗೆ ಹೊರಗೆ ಹೋಗುವೆನೆಂದರೆ ನಡುವೆ ಕೆಲಸಕ್ಕೆ ತಡೆ! ನಿಮಗೆ ಹಬ್ಬ ಹುಣ್ಣಿಮೆಗಳೂ ಇಲ್ಲವೇ? ಸುಮ್ಮನೆ ಮಗುವನ್ನಾದರೂ ಆಡಿಸಬಾರದೇ?' ಎಂದು ಮುನಿಸಿನ ಮಾತುಗಳು ಬರಲಿಕ್ಕೆ ಆರಂಭ!

ಆ ದಿನ—ಅಂದು ನಮ್ಮ ಊರ ರಥೋತ್ಸವ! ನೆರೆ ಮನೆಯ ಗೌರಮ್ಮ ಬೆಳಿಗ್ಗೆ ಬಂದಿದ್ದಳು ನಮ್ಮ ಮನೆಗೆ! ನನ್ನಾಕೆಯ ಕೂಡೆ 'ಬೇಗನೆ ಊಟ ಮಾಡಿ, ರಥಬೀದಿಗೆ ಹೋಗೋಣ'ಯೆಂದು ಪ್ರೋಗ್ರೇಮ್ ಕನ್ಸಲ್ಟ್ ಮಾಡಿ ಹೋಗಿದ್ದಳು. ಇಂದು ನನ್ನಾಕೆಯ ಕೆಲಸ ಎಂದಿನಂತಲ್ಲ;—ಘಂಟೆಗೆ ಅರುವತ್ತು ಮೈಲು ಓಡುವ ಎಕ್ಸ್ಪ್ರೆಸ್ ಟ್ರೈನಿನ ಓಟದಂತೆ. ಹನ್ನೊಂದು ಘಂಟೆಯ ಒಳಗೆ ಊಟ ಸಿದ್ಧ ವಾಯಿತು. 'ಸ್ನಾನಕ್ಕೆ ಹೋಗಬಾರದೇ?'ಯೆಂದು ಅಡಿಗೆ ಕೋಣೆಯಿಂದ ಗ್ರಾಮಫೋನ್ ರಿಕಾರ್ಡಿನ ಸ್ವರ ಕೇಳಿತು. 'ನನ್ನ ಕೈಯಲ್ಲಿ ಮಗುವಿದೆ'ಯೆಂದು ಮೆಲ್ಲನೆ ಹೇಳಿದೆ. ನನ್ನ ಗ್ರಹಚಾರದಿಂದ ಅದು ನನ್ನಾಕೆಗೆ ಕೇಳಿಸಲೇ ಇಲ್ಲ! ನಾನು ಸ್ನಾನಕ್ಕೆ ಹೋಗದಿರುವುದನ್ನು ಕಂಡು, ನನ್ನಾಕೆ ಮುಖ ಕೆಂಪು ಮಾಡಿ, ಕೈ ರಟ್ಟೆ ಹಿಡಿದು, 'ಸ್ನಾನಕ್ಕೆ ಹೋಗ ಲಿಕ್ಕಾಗದೇ—ಹೊತ್ತು ನೆತ್ತಿಗೆ ಬಂತು!'ಯೆಂದಳು ಕೋಮಲ ಸ್ವರದಿಂದ. 'ಸಾರೂ, ಮಗು ಕಾಣದೇ ನಿನಗೆ. ಅದನ್ನು ಇಲ್ಲಿ ಬಿಟ್ಟು ಹೋಗುವುದೇ? ಒಳ್ಳೆ ಹಬ್ಬ!'ಯೆಂದೆ. 'ಮಗುವನ್ನು ತೊಟ್ಟಿಲಲ್ಲಿ ಮಲಗಿಸಬಾರದೇ? ನಿವನ ಕ್ಕೇನೂ ಕಡಿಮೆಯಿಲ್ಲ' ಯೆಂದು ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ನನಗೆ ಭೈರಾಸು ಕೊಟ್ಟು ಕಳುಹಿಸಿದಳು.

ನಾನು ಸ್ನಾನ ಮಾಡಿ ಬರುವ ಹೊತ್ತಿಗೆ ಮಗು ಅತ್ತು ಅತ್ತು ಅರ್ಧವಾಗಿದೆ. ಸರೂ ದೋಸೆ ಹೊಯ್ಯುತಿದ್ದಾಳೆ. ದೋಸೆಯ ಚುಯ್ ಚುಯ್ ಶಬ್ದದಿಂದ ಮಗುವಿನ ಅಳು ಅವಳಿಗೆ ಕೇಳಲೇ ಇಲ್ಲ. ನಾನು, 'ಹೌದೆನೇ, ಮಗು ಅಳುತ್ತಾ ಇದೆ- ಮೂಡಣ ದೇವರಿಗೆ ಹರಕೆ ಹೊತ್ತು ಪಡೆದ ಮಗು. ನಿನ್ನ ಹಬ್ಬದ ಗೌಜಿಯಲ್ಲಿ ಮಗುವಿನ ಅವಸ್ಥೆ ವಿಪರೀತ ಮಾಡುತ್ತೀ ಸರೂ' ಎಂದೆ. ನನ್ನಾಕೆ ಎದ್ದು ತೊಟ್ಟಿಲ ಬಳಿ ಹೋಗಿ, ಮೊಲೆ ಹಾಲು ಕೊಟ್ಟು ಬಂದಳು. ಇವಳ ಅವಸರದಿಂದ ಹಾಲು ಮಗುವಿನ ಮೂಗಿಗೆ ಹೋಗಿ ಮಗು 'ಕ್ರೇಂ' ಎಂದಿತು. ನಾನು ಹೋಗಿ ನೋಡಿದೆ; ಉಸಿರು ತಬ್ಬಿಬ್ಬಾಗಿ ಮಗು, ಚಡಪಡಿಸುತ್ತಿದೆ. ನನ್ನಾಕೆ ಯನ್ನು ಕರೆದು, 'ಮಗುವಿಗೆ ಉಸಿರು ಕಟ್ಟಿದೆ. ನಿನ್ನ ಹಬ್ಬ ಅನ್ಯರನ್ನು ತೆಗೆಯಲಿಕ್ಕೆ' ಎಂದೆ. ಸರೂ ಮಗುವನ್ನು ಎತ್ತಿ, ಮಗುವಿನ ನೆತ್ತಿಗೆ ಎರಡು ಪೆಟ್ಟು ಕೊಟ್ಟು, ಉಸಿರು ಸರಿ ಮಾಡಿ ಹೋದಳು. ಮಗು ಮತ್ತೂ ಅಳಲಿಕ್ಕೆ ಮೊದಲು ಮಾಡಿತು. ಕೈಯಲ್ಲಿ 'ರಂಗಾಣಿ' ಕೊಟ್ಟೆ, 'ಸಕ್ಕರೆ ಕಡ್ಡಿ' ಕೊಟ್ಟೆ, ಮಗು ಅಳುವುದನ್ನು ಬಿಡದು. ಮಗುವನ್ನು ಎತ್ತಿಕೊಂಡೆ. ನನ್ನಾಕೆ ಹೊಡೆದ ಪೆಟ್ಟು ಮಗುವಿಗೆ ಚೆನ್ನಾಗಿ ನಾಟಿತ್ತು. ಅಷ್ಟರಲ್ಲಿ—'ಯಾವಾಗ ನೋಡಿದರೂ ಹಠ ಮಾರಿ ಮಗು! ಅದನ್ನಲ್ಲಿಯೇ ಮಲಗಿಸಿ, ಊಟಕ್ಕೆ ಬರ ಬಾರದೇ?' ಎಂದಳು ನನ್ನಾಕೆ. ಮಗುವನ್ನು ಬಿಡಲಿಕ್ಕೆ ಮನಸ್ಸು ಬಾರದೆ, ಮಗುವನ್ನು ತೊಡೆಯ ಮೇಲೆ ಮಲಗಿಸಿ ಊಟ ಮಾಡಿದೆ. ಮಗು ಹೇಗೂ ಅಳು ಬಿಟ್ಟಿತು.

ಆ ಮೇಲೆ ನನ್ನಾಕೆ ಊಟ ಮಾಡಿ, ಊಂಭಾ ಬನಾ ರಸ್ ಸೀರೆ ಉಟ್ಟುಕೊಂಡು ಹೊರಟಳು. ನಾನೂ ಮಗು ವನ್ನು ಹಿಡಿದು ಹೊರಟೆ. ಅಷ್ಟರಲ್ಲಿ ಗೌರಮ್ಮ ಬಂದಳು. ಅವಳೂ ನಾವೂ ಉತ್ಸವದಲ್ಲಿಗೆ ಹೋದೆವು. ಎಲ್ಲವೂ ಸಿದ್ಧವಾಗಿತ್ತು. ಹಗಲೋತ್ಸವ ಮುಗಿಯಿತು.

ಆ ಮೇಲೆ ಸಂತೆ ತಿರುಗಲಿಕ್ಕೆ ಆರಂಭ. ಪಾತ್ರೆಯ ವ್ಯಾಪಾರಿಯ ಅಂಗಡಿಗೆ ಹೋಗಿ, ಅವನ ಇಡೀ ಅಂಗಡಿ ಯಲ್ಲಿದ್ದ ಪಾತ್ರೆಗಳೆಲ್ಲವನ್ನೂ ಮಗುಚಿ ನೋಡಿದುದಾಯ್ತು ಪಾಪ! ಅಂಗಡಿಯವನಿಗೆ ತೋರಿಸಿ, ತೋರಿಸಿ, ಸಾಕು ಸಾಕಾಗಿರಬೇಕು; 'ಅಮ್ಮಾ, ಆಚೆಯ ಅಂಗಡಿಗೆ ಹೋಗಿ. ಅಲ್ಲಿ ಒಳ್ಳೇ ಪಾತ್ರೆಗಳಿವೆ' ಎಂದನು. ಅಲ್ಲಿಂದ ಇನ್ನೊಂದು

ಅಂಗಡಿಗೆ ಹೋದೆವು. ಅಲ್ಲಿ ಕಂಚಿನ ಬಟ್ಟಲೊಂದನ್ನು ಕೈಯಲ್ಲಿ ಹಿಡಿದು, ನನ್ನಾಕೆ ನೋಡಿ, ಗೌರಮುಕ್ಕ, ಹೇಗಿದೆ ನೋಡಿ' ಎಂದು ಅವಳ ಕೈಗೆ ಕೊಟ್ಟಳು. ಅವಳು ಇವಳ ಕೈಗೆ ಕೊಡುವಾಗ, ಬಟ್ಟಲು ಕೆಳಗೆ ಬಿದ್ದು ಚೂರು ಚೂರಾಯಿತು. ಪಾತ್ರೆಯವನಿಗೆ ಸಿಟ್ಟು ಬಂತು. ನಾನು ಕೂಡಲೆ ಐದು ರೂಪಾಯಿಯ ನೋಟು ಕೊಟ್ಟೆ. ಅದರಿಂದ ಮೂರು ರೂಪಾಯಿಗಳೂ, ಕಂಚಿನ ಬಟ್ಟಲಿನ ಚೂರುಗಳೂ, ನನಗೆ ಸಿಕ್ಕಿದುವು. ಅವುಗಳನ್ನು ಹಿಡಿದುಕೊಂಡೆ. ಆ ಮೇಲೆ ಮಣಿಸರಕಿನ ಅಂಗಡಿಗೆ ಹೋದೆವು. ನಾನು 'ಸರೂ ಸ್ವಲ್ಪ, ಜಾಗ್ರತೆ. ಅಲ್ಲಿ ಮಾಡಿದ ಹಾಗೆ ಇಲ್ಲಿಯೂ ಮಾಡಬೇಡ' ಎಂದೆ. ಅಲ್ಲಿ ಎರಡು ಪಿಂಗಾಣಿಯ ಬೊಂಬೆಗಳನ್ನು ತೆಗೆದು, ಕ್ರಯ ಆಗುವ ಮೊದಲೇ ಮಗುವಿನ ಕೈಗೆ ಕೊಟ್ಟಳು. ಮಗು ಒಂದನ್ನು ಕೆಳಗೆ ಹಾಕಿ ಪುಡಿ ಮಾಡಿತು. ಅಲ್ಲಿಯೂ ಸ್ವಲ್ಪ ನಷ್ಟ ಹಾಕಿ, ತಿರುಗಿ, ತಿರುಗಿ, ಪುನಃ ಉತ್ಸವದ ಬೀದಿಗೆ ಬಂದೆವು. ಆಗ ರಾತ್ರಿಯ ಉತ್ಸವಕ್ಕೆ ಸಿದ್ಧವಾಗಿತ್ತು. 'ಇನ್ನು ರಾತ್ರಿ ಉತ್ಸವವು ಮುಗಿದ ಮೇಲೆಯೇ ಮನೆಗೆ ಹೋಗೋಣ' ಎಂದಳು ನನ್ನಾಕೆ. 'ಅಸ್ತು' ಎಂದೆ ನಾನು.

ಜನಸಂದಣಿ ಬರಲಿಕ್ಕೆ ಆರಂಭವಾಯಿತು. ಢೋಲು, ನಗಾರಿ, ವಾಲಗಗಳೊಡನೆ ಉತ್ಸವವು ಪ್ರಾರಂಭವಾಯಿತು. ಕೊನೆಗೆ ಸಿಡಿಮದ್ದು ಸುಡುವಲ್ಲಿ ಹೋಗಬೇಕೆಂದಳು ನನ್ನಾಕೆ. ಅಲ್ಲಿಗೆ ಹೋಗಿ ಎಲ್ಲರಿಗಿಂತ ಮುಂದೆ ನಿಂತೆವು. ಸಿಡಿಮದ್ದಿನ ಸುಡುವಿಕೆಯ ಗಡಿಬಿಡಿಯಲ್ಲಿ ಕಿಡಿಯೊಂದು ನನ್ನಾಕೆಯ ಸೀರೆಗೆ ಬಿದ್ದು ಫಜೀತಿ! ನೂರ ಇಪ್ಪತ್ತೈದು ರೂಪಾಯಿ ಬೆಲೆಯ ಶೀರೆಯ ಭವಿಷ್ಯವೂ ಮುಗಿಯಿತು. ನನ್ನಾಕೆಗೆ ಕೊಂಚ ಜಖಂ. ಅನಂತರ ಹೇಗೂ ಎರಡು ಘಂಟೆಗೆ ಮನೆಗೆ ಬಂದೆವು. ಸರೂ ಶೀರೆ ತೆಗೆದಿಟ್ಟು, ಗಾಯಕ್ಕೆ ಎಣ್ಣೆ ತಾಗಿಸುವೆನೆಂದು ಹೋದಳು. ಅಲ್ಲಿ ಎಣ್ಣೆಯ ಗಾಜು ಇರುವಲ್ಲಿ ಇರಲಿಲ್ಲ. ದೀಪವಿಡಿದು ಮನೆಯಲ್ಲಿ ಸುತ್ತುವಾಗ, ಸಾಮಾನುಗಳೆಲ್ಲಾ ಕಂಡಾಬಟ್ಟೆ ಬಿದ್ದಿದ್ದವು. ಕಳವು! ಕಳವು!! ಎಂದು ಬೊಬ್ಬಿಟ್ಟಳು ನನ್ನಾಕೆ. 'ಏನೆ' ಎಂದು ನಾನು ನೋಡುವಾಗ, ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಚಿನ್ನಾಭರಣಗಳೂ, ಪಾತ್ರೆಗಳೂ ಎಲ್ಲವೂ ಕಳವು! ಎಲ್ಲಿಯಾದರೂ ಗೋಡೆಗೆ ಕನ್ನ ಹಾಕಿರುವರೋ ಎಂದು ನೋಡಿದೆ. ಇಲ್ಲ. ವಿಚಾರಿಸುವಾಗ ಉತ್ಸವಕ್ಕೆ ಹೋಗುವ ಅವಸರದಲ್ಲಿ ನನ್ನಾಕೆ ಮನೆಗೆ ಬೀಗ ಹಾಕಲೇ ಇಲ್ಲವೆಂದು ತಿಳಿಯಿತು. ಸರೂ, ಉತ್ಸವದ ಉದ್ವೇಗದಲ್ಲಿ ಮನೆ ಹೋಯಿತು' ಎಂದೆ. ಆಕೆ ಅಳಲಿಕ್ಕೆ ಪ್ರಾರಂಭಿಸಿದಳು. ಮರುದಿನ ಪೋಲೀಸರಿಗೆ ರಿಪೋರ್ಟು ಕೊಟ್ಟುದಾಯಿತು. ಆದರೆ ಕಳವು ಈ ವರೆಗೂ ತಲಾಶಿ ಆಗಲೇ ಇಲ್ಲ.

ಅಂದಿನಿಂದಲಂದಿನ ಆ ದಿನವನ್ನು ನಾವು ಮರೆಯಲಿಲ್ಲ. ಮರೆಯಲಿಕ್ಕೆ ಸಾಧ್ಯವೂ ಇಲ್ಲ. ಆದ್ದರಿಂದ ಆ ದಿನವೆಂದು ಹೇಳಿದೆ. ಈಗಲೂ, 'ಸರೂ, ಆ ದಿನ ನೆನಪುಂಟೇ?' ಎಂದರೆ ಪಶ್ಚಾತ್ತಾಪದಿಂದ ಅಳಲಿಕ್ಕಾರಂಭ ಮಾಡುವಳು. ಅದೇ ಅದು ಆ ದಿನ! ಆ ದಿನ!! ಆ ದುರ್ದಿನ!!!

ನಿಶೆಗೆ

ಮಬ್ಬು ಕವಿದ ಮೂಡಲೆಂಬ ಗವಿಯ ಹೊಕಟು ಬೇಗ ನಡೆದು
ನಿಶಾಲಲನೆ! ಪಡುಶರಧಿಯ ಅಲೆಗಳಲ್ಲಿ ನಡೆದು–ನಡೆದು
ಒಂದೆ ಹಗಲಿನಲ್ಲಿ ಹರುಷ ಬೆದರಿಕೆಗಳ ಕನಸ ನೇದೆ
ಅದೇ ನಿನ್ನ ಪ್ರೀಯವದನಳಾಗಿ—ಭಯಂಕರೆಯನಾಗಿ
ಮಾಡಿ ಮೆರೆದಿದೆ–
ನಿನ್ನ ರಥವು ಬಹಳ ವೇಗ
ವಾಗಿ ಹೋಗುತ್ತಿರುತ್ತಿದೆ!
ತಾರೆಗಳನು ಹೊದ್ದುಕೊಂಡು ನಿನ್ನನಿದೀ ಮುಚ್ಚಿಕೊಂಡು
ಹಗಲ ಕಣ್ಣುಗಳನು ನಿನ್ನ ಕೂದಲಿಂದೆ ಕುರುಡು ಮಾ...
ಯವಳ ಚುಂಬಿಸುತ್ತೆ–ಬಳಿಕ ನಗರಭೂಮಿ ಶರಧಿಗಳನು
ಎಲ್ಲವನ್ನು ನಿನ್ನ ಮಂತ್ರಪ್ರೇಮದಿಂದ ತೊಡೆದು ಬಾರೆ!!

* * * *

ಪ್ರಾತಃಕಾಲವೆದ್ದು ಉಷೆಯ ನೋಡಿ ಬಿಸಿಯ ಉಸಿರ ಬಿಟ್ಟೆ
ಬೆಳಕು ಮೇಲೆಯೇರಿದಂತೆ–ಮಂಜು ಬಿಟ್ಟು ಓಡಿದಂತೆ
ಚಂಡಕಿರಣ ಹೂಮಿಡಿಗಳ ಮೇಲೆ ಭಾರವಿರಿಸಿದಂತೆ
ಪ್ರೇಮಪಡೆಯದಲೆವ ಅತಿಥಿಯಂತೆ ಅಲೆದು ಉಸಿರಬಿಟ್ಟೆ!
ಮಬ್ಬು ಕವಿಯಿತು–
ಎನ್ನ ಹೃದಯದಾಗಸವನು
ಮುಗಿಲು ಮುಸುಕಿತು!
ನಿನ್ನ ಅನುಜ ಮೃತ್ಯು ಬಂದ–ನೀನು ಎನ್ನ ಮಿತ್ರನಂದ
ನಿನ್ನ ಕುವರಿ ನಿದ್ದೆಯವಳು ಬಳಿಯ ಸಾರಿ ಅಂದಳಿಂದು
ನಿನ್ನ ಪಕ್ಕದಲ್ಲಿ ಎನ್ನ ಬೀಡಮಾಡಬಹುದೆ ಎಂದು–
ಬೇಡವೆಂದೆ–ಕೂಡದೆಂದೆ!–ದೂರಸಾರು ಎಂದೆ ನಿಂದು!!

* * * *

ನಿಶೆಯ, ಮಿತ್ತು ನಿದ್ದೆ ಇಬ್ಬರಲ್ಲಿ ವರವ ಬೇಡೆ ನಾನು
ನಿಶಾಲಲನೆ! ನಿನ್ನ ಪಾದಕೆರಗಿ ನಿಂದು ಬೇಡುತಿಹೆನು–
ಕೇಳುತಿರುವೆನು–
ವೇಗವಾಗಿ ಬರುವ ನಿನ್ನ
ಕಂಡು ಹರುಷಬಡುವೆನು!

ನೀಲಾಂಗ, ಪುತ್ತೂರು.

ಸ್ವಾರ್ಥ ಸಾಧನೆ.

ಲೇಖಕರು:—ಶ್ರೀ. ಮಾದರಬೆಟ್ಟು ರಂಗರಾಯರು

ಏನಾಶ್ಚರ್ಯ! ಕೋಣೆಯಲ್ಲೆಲ್ಲಾ ಶೋಧಿಸಿದರೂ ಸಿಕ್ಕಲಿಲ್ಲ! ನಿನ್ನೆ ತಾನೇ ಕೊಂಡುಕೊಂಡ ಅಮೂಲ್ಯ ವಜ್ರದುಂಗುರ; ಇದೇ, ಈಗ ಸ್ನಾನಕ್ಕೆ ಹೋಗುವ ಮೊದಲು, ಬೆರಳಿನಿಂದ ತೆಗೆದು ಮೇಜಿನ ಮೇಲಿಟ್ಟದು—ಚೆನ್ನಾಗಿಯೂ ನೆನಪಿದೆ; ಮಿಂದು ಬರುವುದರೊಳಗೆ ಅದೆಲ್ಲಿ ಹೋಗಿರಬಹುದು?

ಶ್ರೀಮತಿ ಕನಕಾಂಬೆಯು ಕ್ರೋಧ ಮಿಶ್ರಿತ ಸ್ವರದಿಂದ "ಏ ರಂಗ!" ಎಂದು ಒದರಿದಳು.

ಒಡನೆ ಅಡಿಗೆ ರಂಗನು ಓಡಿ ಬಂದು—"ಏನಮ್ಮ?"

ಕನಕಾಂಬೆ:–ಈ ಮೇಜಿನ ಮೇಲಿದ್ದ ಒಂದು ಉಂಗುರವನ್ನು ನೀನು ನೋಡಿರುವಿಯೊ?

ರಂಗ:–(ಕಣ್ಣರಳಿಸಿ) ಇಲ್ಲಮ್ಮ; ನಾನಿತ್ತ ಬರಲೇ ಇಲ್ಲವಲ್ಲ!

ಕನಕಾಂಬೆ:–(ಹುಬ್ಬು ಸುರುಗಿ) ಹಾಗಾದರೆ ಮತ್ತಾರು ಬಂದಿದ್ದರು?

ರಂಗ:–ಲಕ್ಷ್ಮಿಯು ಗುಡಿಸಲಿಕ್ಕೆ ಬಂದಂತೆ ತೋರುತ್ತದೆ.

ಕನಕಾಂಬೆಯು "ಏ ಲಕ್ಷ್ಮಿ!" ಎಂದು ನಿಡುಗೊರಳು ದೆಗೆಯುತ್ತಲೇ ಆ ಸೇವಕಿಯು "ಓ!" ಗೊಟ್ಟು ಧಾವಿಸಿ ಬಂದಳು.

ಕನಕಾಂಬೆ:–ಹೌದೇನೆ--ನಾನು ಸ್ನಾನಕ್ಕೆ ಹೋದಾಗ ನೀನೀ ಕೋಣೆಯೊಳಗೆ ಬಂದಿದ್ದೆಯೊ?

ಲಕ್ಷ್ಮಿ:–ಗುಡಿಸ ಬಂದಿದ್ದೆನಮ್ಮ.

ಕನಕಾಂಬೆ :—ಆಗ ಈ ಮೇಜಿನ ಮೇಲೊಂದು ಉಂಗುರವಿದ್ದುದನ್ನು ನೋಡಿರುವಿಯೊ?

ಲಕ್ಷ್ಮಿ:–(ತುಸು ಭಯದಿಂದ) ಕಾಣೆನಮ್ಮ.

ಕನಕಾಂಬೆ:–ಮೇಜಿನ ಮೇಲೆ ನಿನ್ನ ಕಣ್ಣೇ ಬೀಳಲಿಲ್ಲವೆ? ಸುಳ್ಳು ಹೇಳಬೇಡ; ಕ್ಷಮಿಸುವೆನು.

ಲಕ್ಷ್ಮಿ:–(ಎದೆಯದುರಲು) ಸುಳ್ಳು ಹೇಳೆನಮ್ಮ! ನಿಜವಾಗಿಯೂ ನಾನು ಯಾವ ಉಂಗುರವನ್ನೂ ಕಾಣೆನು.

ಕನಕಾಂಬೆ:–ನಿನ್ನ ಹೊರತು ಇಲ್ಲಿಗೆ ಬೇರೆ ಯಾರೂ ಬರಲಿಲ್ಲವಂತೆ; ಹಾಗಾದರೆ ಅದೆಲ್ಲಿ ಹೋದೀತು?

ಲಕ್ಷ್ಮಿ:–ನಾನಿಲ್ಲಿಗೆ ಬರುವಾಗ ಚಿಕ್ಕರಾಯರು ಈ ಕೋಣೆಯಿಂದ ಹೊರಗೆ ಬಂದರು; ಅವರೇನಾದರೂ ನೋಡಿರುವರೋ ವಿಚಾರಿಸಬೇಕಮ್ಮಾ!

ಲಕ್ಷ್ಮಿಯು ಹೇಳಿದುದು ದಿಟ. ಕನಕಾಂಬೆಯು ಮಗನನ್ನು ಕರೆದಳು. ಮಾಳಿಗೆಯ ಮೇಲೆ ಈ ಸಂಭಾಷಣೆಯನ್ನೆಲ್ಲಾ ಕೇಳುತ್ತಿದ್ದ ಸದಾಶಿವನು ಬಡಬಡನೆ ಕೆಳಗೆ ಬಂದು, "ಅಮ್ಮಾ, ಏನು?" ಎಂದು ಕೇಳಿದನು.

ಕನಕಾಂಬೆ:–ಹೌದೇನೋ, ನೀನೀ ಕೋಣೆಯೊಳಗೆ ಬಂದಿದ್ದಿಯಂತೆ. ನಾನು ಆ ಹೊಸ ಉಂಗುರವನ್ನು ಈ ಮೇಜಿಯ ಮೇಲೆ ಇಟ್ಟಿದ್ದೆ. ನೀನು ತೆಗೆದಿರುವೆಯೇನು?

ಸದಾಶಿವ:–(ಆಶ್ಚರ್ಯದಿಂದ) ಇಲ್ಲವಲ್ಲಮ್ಮ! ನಾನು ಆ ಕನ್ನಡಿಯಲ್ಲಿ ಮುಖ ನೋಡಿಕೊಂಡು ಹೋಗಿದ್ದೇನಷ್ಟೇ! ಆಗ ಉಂಗುರ ಈ ಮೇಜಿನ ಮೇಲೆಯೇ ಇದ್ದಿತಲ್ಲ!

ಸರಿ; ವಿಚಾರಣೆ ಇಲ್ಲಿಗೆ ತೀರಿತು. ಸ್ವಂತ ಮಗನ ಮಾತನ್ನು ನಂಬದವರುಂಟೇ? ಇನ್ನು ಮನೆಯವನೇ ಆದ ಅಡಿಗೆಯವನೂ ಅಂತಹ ಬೆಲೆ ಬಾಳುವ ವಸ್ತುವನ್ನು ಕದಿಯುವ ಸಂಭವವೂ ಇಲ್ಲ. ಕಡೆಗೆ ಆ ಅವಮಾನಕಾರಕ ದುರಾರೋಪವು ನಿಷ್ಕಲಂಕಿನಿಯಾದ ಲಕ್ಷ್ಮಿಯ ಮೇಲೆಯೇ ಬಿದ್ದಿತು. ಪಾಪ! ಸಾಕ್ಷ್ಯಹೀನಳಾದ ಸಾಧುಲಕ್ಷ್ಮಿಯು ಸತ್ಯ ಸಂಗತಿಯನ್ನು ಅತ್ತು ಬೇಡಿ ಪೇಚಾಡಿ ಹೇಳಿಕೊಂಡುದೂ ನಿಷ್ಫಲ! ಶ್ರೀಮಂತತನದ ಸಿಹಿ ತಿಂದು ಬೊಜ್ಜು ಬೆಳೆದ ಕನಕಾಂಬೆಯು ಕೆಂಪು ಕುಂಬಳಕಾಯಿಯ ಹಾಗೆ ಉಬ್ಬು ಮೊಗದ ಕ್ರೂರ ದೃಷ್ಟಿಯನ್ನು ಲಕ್ಷ್ಮಿಯ ಮೇಲೆ ಬೀರಿ, ಸಿಡಿಲಿನ ಹಾಗೆ ಬೈದಳು; "ಎಲ್ಲಿಟ್ಟಿದ್ದಿ ಉಂಗುರ? ಹೇಳು–ರಂಡೆ!" ಎಂದು, ಆನೆ ಕಾಲಿನಂತಿರುವ ಕೈಯು ಸಣ್ಣ ಮುಷ್ಟಿಯಿಂದ ಗುದ್ದಿದಳು; ಮುಂಡೆಗೆ

ಹೆಟ್ಟಿಯೂ ಹೆಟ್ಟಿದಳು. ಲಕ್ಷ್ಮಿಯು ಅಂಗವೆಲ್ಲಾ ಝಡತಿ ಮಾಡಿದುದೂ ಆಯಿತು. ಆದರೆ, ಉಂಗುರದ ಸುದ್ದಿಯೇ ಇಲ್ಲ! ಹಾ! ಲಕ್ಷ್ಮಿಯು ಮಾತ್ರ ಗಡಗಡ ನಡುಗುತ್ತ, ಬಳ ಬಳ ಅಳುತಿದ್ದಾಳೆ!

ಕಡೆಗೆ ಕನಕಾಂಬೆಯು ನಿರುಪಾಯಳಾಗಿ—"ಹುಂ! ಈ ಕಳ್ಳೆಯನ್ನು ಸುಮ್ಮನೆ ಬಿಟ್ಟೇನೆ? ಇವಳೇ ಕದ್ದು ಎಲ್ಲೋ ಅಡಗಿಸಿಟ್ಟಿರಬೇಕು! ದುರುಳೆ! ಒಳ್ಳೆ ಮಾತಿನಲ್ಲಿ ಅದನ್ನು ತೋರಿಸಲಾರೆಯಲ್ಲವೇ? ತಡೆ, ಎಲೊ! ಸದಾಶಿವ! ಹೋಗೊ ಪೋಲೀಸಿನವರನ್ನು ಕರೆದು ತಾರೋ! ಹುಂ! ಕಳ್ಳೆ! ನಡೆ! ಈಗಾ ಬೂದಿ ಕೊಟ್ಟಿಗೆಯಲ್ಲಿ ಬಿದ್ದಿರು!" ಎಂದು ಕರ್ಕಶವಾಗಿ ಬೈಯ್ಯುತ್ತ, ಅವಳನ್ನು ದರದರ ಎಳೆದುಕೊಂಡು ಮನೆಯ ಹಿಂಗಡೆ ತೋಟದಲ್ಲಿರುವ ಬೂದಿ ಕೊಟ್ಟಿಗೆಯಲ್ಲಿ ಅವಳನ್ನು ಕೆಡವಿ ಬಾಗಿಲು ಹಾಕಿ ಬಂದು ಬಿಟ್ಟಳು. ಸದಾಶಿವನು ಪೋಲೀಸರನ್ನು ಕರೆಯಲಿಕ್ಕಾಗಿ ಹೊರಟು ಹೋದನು. ಹೊಟ್ಟೆ ಹಸಿದುದರಿಂದ ಕನಕಾಂಬೆಯು ಮಧ್ಯಾಹ್ನದ ಭೋಜನಕ್ಕಾಗಿ ಅಡಿಗೆ ಮನೆಯನ್ನು ಸೇರಿದಳು. ಅಲ್ಲಿ ನೆಲಕ್ಕೆ ಕೈಯೂರುಗೊಟ್ಟು ತನ್ನ ಬಿಡು ಹೊಟ್ಟೆಯನ್ನು ತುಂಬುತ್ತಿರುವಾಗ, ಅತ್ತ ಪಾಪ! ಹಸಿದೊಡಲ ಲಕ್ಷ್ಮಿಯು ದುರಾರೋಪದ ಬೇಗೆಯೊಂದಿಗೆ ಬೇಯುತ್ತ, ಆ ಬೂದಿ ಕೊಟ್ಟಿಗೆಯೊಳಗೆ ಬಂಧಿಯಾಗಿದ್ದಾಳೆ!

* * * *

ಲಕ್ಷ್ಮಿಯು ವಯಸ್ಸು ೨೩ ವರ್ಷಗಳು; ಸುರೂಪಿಣಿಯು; ೧೧ ವರ್ಷಗಳ ಹಿಂದೆ ಅವಳ ಪತಿಯು ತೀರಿ ಹೋಗಿದ್ದನು. ಅಂದಿನಿಂದ ಲಕ್ಷ್ಮಿಯು ಜೀವನ ನಿರ್ವಾಹಕ್ಕಾಗಿ ಮಂಗಳೂರಿಗೆ ಬಂದು, ತಾಯಿಯೊಂದಿಗೆ ಮುರುಕು ಗುಡಿಸಲಿನಲ್ಲಿ ವಾಸಿಸುತ್ತ, ಧನಿಕರ ಊಳಿಗವನ್ನು ಕೈಕೊಂಡಳು. ಬಡತನಕ್ಕೂ ಸುಜನತನಕ್ಕೂ ನಿಕಟ ಸಂಬಂಧವೆಂದು ತೋರುತ್ತದೆ; ಅಂತೆಯೇ ಬಡತನವು ತನ್ನ ಕಬ್ಬೊದೆಯನ್ನು ಆ ತಾಯಿ ಮಕ್ಕಳ ಮೇಲೆ ಬಹು ದಪ್ಪಿತವಾಗಿ ಹಾಕಿ ಬಿಟ್ಟಿತ್ತು.

'ತಾಗಿದೆಡೆಗೆ ತಾಗು'ವಂತೆ, ಪತಿವಿಯೋಗವಾದ ೫ ವರ್ಷಗಳೊಳಗೆ ಆಕೆಗೆ ಮಾತೃವಿಯೋಗ ದುಃಖವು ಪ್ರಾಪ್ತವಾಯಿತು. ಸರಿ; ಇದರಿಂದ ಇನ್ನಾಕೆಯು ಸತ್ತರೂ ಕಂಬನಿ ಮಿಡಿವವರಿಲ್ಲ! ಈ ತಾಪಗಳು ಮಾತ್ರವಲ್ಲದೆ, ಧನಿಕರ ದೌರ್ಜನ್ಯದ ತಾಪವೊಂದು ಪ್ರತ್ಯೇಕವಿತ್ತು. ಅವಳು ಶ್ರೀಮಂತ ರಂಗರಾಯರು (ಇವರ ಪತ್ನಿಯೇ ಕನಕಾಂಬೆ; ಈ ರಾಯರು ಈ ದಿನ ಉಡುಪಿಗೆ ಹೋಗಿದ್ದರು.) ಮನೆಯಲ್ಲಿ ಸೇವಾವೃತ್ತಿಯನ್ನು ಕೈಕೊಂಡು ಕೆಲವು ಕಾಲವಾಗಿತ್ತು. ಅಲ್ಲಿ ಕೆಲಸವು ವಿಪುಲವಾಗಿದ್ದರೂ ಸಂಬಳವು ಮಾತ್ರ ೩ ರೂಪಾಯಿಗಳು. ಆಕೆಯು ಬೆಳಿಗ್ಗೆ ಕೆಲಸಕ್ಕೆ ಬಂದು, ಮಧ್ಯಾಹ್ನ ಗುಡಿಸಲಿಗೆ ತಿರುಗಿ, ಪುನಃ ಬಂದು, ಕತ್ತಲಾಗಲು ಮನೆಗೆ ಮರುಗುತ್ತಿದ್ದಳು. ಆಕೆಯು ತಾಳ್ಮೆಯ ತವರುಮನೆಯೂ, ಸದ್ಗುಣಭೂಷಿತೆಯೂ ಆಗಿದ್ದುದರಿಂದಲೇ ಅಷ್ಟೆಲ್ಲ ಸಂಕಟಗಳನ್ನು ಸಹಿಸಿಕೊಂಡು ಧರ್ಮದಲ್ಲಿರುವಳೆನ್ನಬೇಕು. ಇಲ್ಲದಿದ್ದರೆ ಆ ಸುಂದರೀಮಣಿಯು ಸಾವಿರಾರು ಧನಿಕ ಯುವಕರ ಪಾಲಿನ ವಸ್ತುವಾಗಿ ಐಶ್ವರ್ಯದಿಂದ ಬಲಿತು ಬೀಳುತ್ತಿದ್ದಳಲ್ಲವೇ? ಇರಲಿ.

ಸಂಜೆಯು ಮೇಲೆ ಕತ್ತಲೆ ಕವಿಯುವಂತೆ, ಮಾತೃವಿಯೋಗ ದುಃಖಾಂಬುಧಿಯಲ್ಲಿ ತೇಲಿ ದಡ ಸೇರುವ ವೇಳೆಗೆ ಸರಿಯಾಗಿ, ಉಂಗುರ ಕಳವಿನ ದುರಾರೋಪವೂ ಅವಳ ಮೇಲೆ ಬೆಟ್ಟದಂತೆ ಬಿದ್ದಿತು. ಅವಳು ಆ ಬೂದಿ ಕೋಣೆಯೊಳಗೆ ದೇಹಭಾನವಿಲ್ಲದೆ ಮೂಕರೋದನ ಮಾಡುತ್ತ ಕುಳಿತಿರಲು, ಯಾರೋ ಬಾಗಿಲ ಚಿಲಕ ಕಳಚುವಂತಾದುದರಿಂದ ಮುಖವೆತ್ತಿ ನೋಡಿದಳು. ಅಷ್ಟರಲ್ಲಿ ಬಾಗಿಲು ತೆರೆದು ಸದಾಶಿವನು ಅವಳೆದುರು ಬಂದು ನಿಂತನು.

* * * *

"ಲಕ್ಷ್ಮಿ!" ಎಂದು ಸದಾಶಿವನು ಮೆಲ್ದನಿದೆಗೆದನು. ಲಕ್ಷ್ಮಿಯು ನಿರುತ್ತರ; ಮೊಗದಲ್ಲಿ ಮಾತ್ರ ತಿರಸ್ಕಾರದ ಕಳೆಯೊಂದು ವ್ಯಕ್ತವಾಯಿತು.

"ನಿನಗೆ ಈ ಕುತ್ತದಿಂದ ಪಾರಾಗಬೇಕೆಂಬ ಇಚ್ಛೆಯುಂಟೇ?" ಎಂದು ಸದಾಶಿವನು ಕೇಳಿದನು.

ಸದಾಶಿವನ ದುರ್ಮನೋಗತವು ಲಕ್ಷ್ಮಿಗೆ ಗೊತ್ತು. ಆಕೆಯು ಮುಖ ತಿರುಗಿಸಿ ಹೇಳಿದಳು:—"ದೇವರೇ ಕಾಪಾಡಬೇಕು!"

"ಅಲ್ಲಲ್ಲ! ಇದೋ—ನೋಡು ಉಂಗುರುವನ್ನು!"

ಲಕ್ಷ್ಮಿಯು ಸದಾಶಿವನ ಕೈಯಲ್ಲಿರುವ ವಜ್ರದುಂಗುರವನ್ನು ನೋಡಿ:—"ಆಹಾ! ಬಡವಳಾದ ನನ್ನನ್ನು ವೃಥಾಪವಾದಕ್ಕೆ ನೂಕಿ ನೀವಾವ ಪುಣ್ಯಲೋಕವನ್ನು ಪಡೆಯುವಿರೊ! ಹಾಯ್! ಹಾಯ್! ನಿಮ್ಮ ದುರ್ಮನಸ್ಸೇ!"

"ಚಿಂತಿಸಬೇಡ ಲಕ್ಷ್ಮಿ; ನಿನ್ನ ಮೇಲಿರುವ ಈ ಅಪವಾದ ಕೊಳೆಯನ್ನೆಲ್ಲಾ ನಾನು ತೊಳೆಯಬಲ್ಲೆನು. ಆದರೆ-"

"ಹಾಗಾದರೆ ನನ್ನನ್ಯಾಕೆ ಇಷ್ಟೊಂದು ಘೋರ ತೊಂದರೆಗೆ ನೂಕಿದಿರಿ?"

"ಅದು ನನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಲಿಕ್ಕೆ!"

"ಅದೀಗ ನೆರವೇರಿತೇನು?"

"ಇಲ್ಲ; ಅದನ್ನೀಗ ನೀನು ನೆರವೇರಿಸಬೇಕು! ಆಗ—ನೋಡೆಲೆ! ಸುಂದರಿ, ನೀನು ನಿರಪರಾಧಿನಿಯಾಗಿ ಬಿಡುತ್ತಿ!"

"ಹೋ! ಹೋ! ತಿಳಿಯಿತು! ತಿಳಿಯಿತು! ತೊಂದರೆ ಪಡಿಸದೆ ಹೊರಟು ಹೋಗಿರಿ ನೋಡೋಣ!" ಮರ್ಯಾದೆ ಉಳಿಯಬೇಕಾದರೆ . . . .

ಲಕ್ಷ್ಮಿಯು ಅಸಹ್ಯಭಾವದಿಂದ ಹಿಂಸರಿದಳು. ಸದಾಶಿವನು ಕಿಸೆಯಿಂದ ಕೆಲವು ನೋಟುಗಳನ್ನು ತೆಗೆದು ಅವಳಿಗೆ ತೋರಿಸುತ್ತ ಒಂದಡಿ ಮುಂದರಿದು,—"ಇಗೋ ನೋಡೆ! ನನ್ನ ಮನೋಭಿಷ್ಟವನ್ನು ಪೂರಯಿಸಿದರೆ ನಿನಗೀ ಐವತ್ತು ರೂಪಾಯಿಗಳು ಸಿಗುವುವು.! ಯಾಕೆ? ಈಗಲೇ ಇದನ್ನು ಹಿಡಿ! ಅಲ್ಲದೆ ನಿನ್ನ—"

ಲಕ್ಷ್ಮಿಯು ಕೋಪದಿಂದ ಭ್ರುಕುಟಿತಲೋಚನೆಯಾಗಿ "ಅನರ್ಥಕಾರಿಯಾದೀ ಹಾಳು ಕಾಗದಗಳನ್ನು ಬೆಂಕಿಗೆ ಹಾಕಿರಿ—ಬೆಂಕಿಗೆ!! ನಾನೇನು ಅಂತಹ ನೀಚಳೆಂದೇ ನಿಮ್ಮ ನೆನಸು? ಹುಂ! ಹೊರಡಿರಿ—ಇಲ್ಲಿಂದ!"

"ಎಲ! ಶುಂಠಹೆಣ್ಣೆ! ಏನು ಮಾಡುವಿಯೋ ಮಾಡು! ನೋಡುವೆನು ಅದಾವನು ನಿನ್ನ ಸಾಹಾಯ್ಯಕ್ಕೆ ಬರುವನೋ ನೋಡಿಬಿಡುವೆನು!"

ನೀಚನಿಗೆ ನಾಚಿಗೆಯೂ ಇಲ್ಲ; ಯೋಚನೆಯೂ ಇಲ್ಲ. ಸದಾಶಿವನು ಉನ್ಮತ್ತತನದಿಂದ ಲಕ್ಷ್ಮಿಯ ಕೈಗಳನ್ನು ಹಿಡಿದೆಳೆದನು. ಲಕ್ಷ್ಮಿಯು "ದೇವರೇ ಕಾಯಪ್ಪಾ!" ಎಂದು ಮೊರೆಯಿಟ್ಟಳು. ಸದಾಶಿವನು ಅವಳ ಬಾಯ್ಮುಚ್ಚಿಸುವ ಪ್ರಯತ್ನ ಮಾಡಿದನು. ಆದರೆ ಶ್ರೀದೇವರು ಸತೀಮಾನರಕ್ಷಣಾದಕ್ಷನಾಗಿರಲು ಆ ನೀಚನ ಅತ್ಯಾಚಾರವು ಹೇಗೆ ಸಫಲವಾದೀತು?

"ಏನು-ಏನದು? ಆಂ?" ಎಂಬ ಕನಕಾಂಬೆಯ ಸಿಡಿಲ್ಧನಿಯು ಸದಾಶಿವನನ್ನು ಸ್ತಬ್ಧಗೊಳಿಸಿತು. ಕನಕಾಂಬೆಯು ಅದೇ ಊಟಮಾಡಿ ಕೈತೊಳೆದವಳೇ ಗುಡುಗುಡು ಅಲ್ಲಿಗೇ ಬರುತ್ತಿದ್ದಳು. ಸಮಯಚತುರನಾದ ಸದಾಶಿವನು ಅಷ್ಟರಲ್ಲಿ ಲಕ್ಷ್ಮಿಯನ್ನು ಬಿಟ್ಟು-"ಅಮ್ಮಾ! ಅಮ್ಮಾ! ಬೇಗ ಬಾ! ನೋಡಿಲ್ಲಿ ಕಳ್ಳೆಯ ವಿಚಿತ್ರವನ್ನು!" ಎಂದು ಒದರಿದನು.

ಕನಕಾಂಬೆಯು ಒಡನೆ ಅಲ್ಲಿಗೆ ಬಂದು,—"ಅದೇನೊ ಸಂಗತಿ? ನೀನು ಪೋಲೀಸರನ್ನು ಕರೆತರಲಿಕ್ಕೆ ಹೋಗಲಿಲ್ಲವೇ?"

"ಇಲ್ಲಿ ನೋಡಮ್ಮ-ನೀನು!" ಎಂದು ಸದಾಶಿವನು ಉಂಗುರವನ್ನು ತಾಯಿಗೆ ತೋರಿಸುತ್ತ,—"ಇದನ್ನೀ ಕಳ್ಳೆಯು ಅದೆಲ್ಲಿ ಅಡಗಿಸಿದ್ದಳೋ ಏನೊ! ಇದೊಮ್ಮೆ ಕಡೇ ಬಾರಿ ಇವಳೊಡನೆ ವಿಚಾರಿಸಿ, ಆ ಮೇಲೆ ಪೋಲಿಸ್ ಸ್ಟೇಷನ್ನಿಗೆ ಹೋಗೋಣವೆಂದು, ನಾನು ಫಕ್ಕನೆ ಬಾಗಿಲು ತೆರೆದು ಒಳಗೆ ಬರುತ್ತೇನಮ್ಮ-ಏನು ಹೇಳಲಿ! ಇವಳ ಅಂಗೈಯಲ್ಲೇ ಈ ಉಂಗುರವಿತ್ತು! ಆಕಸ್ಮತ್ತ್ ನನ್ನನ್ನು ನೋಡಿಯೇ, ಇವಳು ಹಾಗೆ ರಕ್ಕಸಿಯಂತೆ ಚೀರಿಬಿಟ್ಟಳು!" ಎಂದು ಉಂಗುರವನ್ನು ತಾಯಿಗಿತ್ತನು. ದುಷ್ಟನ ದುರ್ವರ್ತನೆಯು ಬಯಲಾಗಲಿಲ್ಲ. ಆದರೆ ಲಕ್ಷ್ಮಿಯ ಶವವೊಂದು ಮಾತ್ರ ಮರುದಿನ ಕೆರೆಯಲ್ಲಿ ಕಂಡುಬಂತು.

---

೩ ರೂ. ಸಂಬಳದಿಂದ ೭೫ ಕೋಟಿ ರೂ. ದಾನ ಮಾಡಿದ

ಪುರುಷ ಸಿಂಹ.

ಆಂಡ್ರ್ಯೂ ಕಾರ್ನೆಗಿಯವರ ಸಂಕ್ಷಿಪ್ತ ಜೀವನ ಚರಿತ್ರೆ.

ಆಂಡ್ರ್ಯೂ ಕಾರ್ನೆಗಿಯವರು ಸ್ಕಾಟ್ಲೆಂಡ್ ದೇಶದ ಒಂದು ಸಾಮಾನ್ಯ ಕುಟುಂಬದಲ್ಲಿ ೧೮೩೫ನೇ ಇಸವಿಯಲ್ಲಿ ಜನ್ಮವೆತ್ತಿದರು. ಬಡತನದ ಬಿಗಿತದಿಂದಲೂ ಸಂಸಾರದ ಕ್ಲೇಶದಿಂದಲೂ ಚಿಕ್ಕಂದಿನಲ್ಲಿ ಇವರ ವಿದ್ಯಾಭ್ಯಾಸವು ಸುಗಮವಾಗಿ ನಡೆಯಲಿಲ್ಲ. ಅಲ್ಲದೆ ಕೇವಲ ಚಿಕ್ಕವಯಸ್ಸಿನಲ್ಲಿ, ಅಂದರೆ, ಸುಮಾರು ೧೬ನೇ ವಯಸ್ಸಿನಲ್ಲಿ ತಂದೆಯು ಮೃತಪಟ್ಟನು. ಕಾರ್ನೆಗಿಗೆ ಸಾಮಾನ್ಯ ವಿದ್ಯಾಭ್ಯಾಸದಲ್ಲಿ ಅಷ್ಟೇನೂ ಅಭಿರುಚಿಯಿರಲಿಲ್ಲವಾದುದರಿಂದಲೂ ಸಂಸಾರದ ಜವಾಬ್ದಾರಿಯು ಬಂದುದರಿಂದಲೂ ವಾರಕ್ಕೆ ೩–೧೨–೦ ಸಂಬಳದ ಒಂದು ಚಿಕ್ಕ ನೌಕರಿಗೆ ಸೇರಿದನು. ಇಷ್ಟು ಸಂಬಳದಲ್ಲಿ ತನ್ನ ಜೀವನವನ್ನು ಅತಿ ಕಷ್ಟದಿಂದ ಮುಂದುವರಿಸುತ್ತಿದ್ದನು. ಅನಂತರ ವಾರಕ್ಕೆ ೯ ರೂ. ಸಂಬಳದ, ತಂತೀ ಸಮಾಚಾರವನ್ನು ತಲಪಿಸುವ ಜವಾನನ ವೃತ್ತಿಗೆ ಸೇರಿದನು. ಅದೇ ಕೆಲಸದಲ್ಲಿ ತನ್ನ ಬುದ್ಧಿಕುಶಲತೆಯನ್ನು ತೋರಿಸಿ, ತಂತೀ ವರ್ತಮಾನದ ಮಾಸ್ತರರಾಗಿ ತಿಂಗಳಿಗೆ ೭೦ ರೂ. ಸಂಬಳ ಪಡೆಯಲಾರಂಭಿಸಿದನು. ಅನಂತರ ತಾನು ಕೆಲಸ ಮಾಡುತ್ತಿದ್ದ ಕಂಪೆನಿಯ ಯಜಮಾನನು ತನ್ನಲ್ಲಿಟ್ಟಿದ್ದ ಅಭಿಮಾನದಿಂದಲೂ, ತನ್ನ ಸರಳ ಜೀವನದ ನಿಷ್ಪಾಪ ವೃತ್ತಿಯಿಂದಲೂ ತನ್ನ ಸುತ್ತುಮುತ್ತಿನ ಜನರೆಲ್ಲರ ಪ್ರೀತಿ ಗೌರವಗಳಿಗೆ ಪಾತ್ರನಾಗಿ ತನ್ನ ಯಜಮಾನನ ಪ್ರೇರಣೆ ಮತ್ತು ಸಹಾಯದಿಂದ ಒಂದು ಕಂಪೆನಿಯಲ್ಲಿ ೨ ಸಾವಿರ ರೂಪಾಯಿ ಬೆಲೆ ಬಾಳುವ ೧೦ ಷೇರುಗಳನ್ನು ಕೊಂಡುಕೊಂಡನು.

ಅಂದಿನಿಂದ ಕಾರ್ನೆಗಿಯ ಸುಕರ್ಮವು ಉದಯಕ್ಕೆ ಬಂದು ಒಂದರಿಂದೊಂದು ಲಾಭದಾಯಕವಾದ ಉದ್ಯಮಗಳಿಗೆ ಕೈಹಚ್ಚಿ ಆರಂಭದಲ್ಲಿ, ಸೀಮೆಯೆಣ್ಣೆಯನ್ನುತೆಗೆಯುವ ಪ್ರಯತ್ನ ಮಾಡಿ ೧೧೦೦೦೦ ರೂಪಾಯಿಗೆ ಗನಿಗಳನ್ನು ಕೊಂಡುಕೊಂಡನು. ಕೆಲವು ಕಾಲದಲ್ಲಿ ಆ ಗನಿಗಳನ್ನು ೧೪೦೦೦೦೦೦ ರೂಪಾಯಿಗಳಿಗೆ ಮಾರಿ, ಪ್ರಪಂಚದಲ್ಲೆಲ್ಲಾ ಅತ್ಯುತ್ತಮವೆನಿಸಿದ ಒಂದು ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿದನು. ಆ ಕಾರ್ಖಾನೆಯ ಶಾಖೆಗಳನ್ನು ನಾನಾ ಕಡೆ ಏರ್ಪಡಿಸಿದನು. ಇವನ ಕಾರ್ಖಾನೆಯಲ್ಲಿ ಒಟ್ಟು ೪೦೦೦೦ ಜನರು ಕೂಲಿ ಮಾಡುವಂತಾಯಿತು. ವರ್ಷ ಒಂದಕ್ಕೆ ೧೩-೧೪ ಕೋಟಿ ರೂ. ಲಾಭ ಬರಲು ಆರಂಭವಾಯಿತು. ಕಾರ್ನೆಗಿಯ ಕೈಕೆಳಗೆ ಕೆಲಸ ಮಾಡುತ್ತಿದ್ದ ಕೆಲವರಿಗೆ ತಿಂಗಳಿಗೆ ರೂ. ೨½ ಲಕ್ಷ, ರೂ. ೫೦೦೦೦ ಹೀಗೆ. ಈಗಲೂ ಸಂಬಳ ಬರುತ್ತಿರುವುದು. ಈ ರೀತಿಯಲ್ಲಿ ಸಂಪಾದನೆ ಮಾಡಿದ ದ್ರವ್ಯವನ್ನು ಕಾರ್ನೆಗಿಯು ಈ ಕೆಳಗೆ ಕಂಡಂತೆ ಉಪಯೋಗಿಸಿದನು:–

ಪುಸ್ತಕಭಂಡಾರಗಳ ಕಟ್ಟಡಗಳು	೧೮,೧೧,೦೦೦೦೦
ಕಾಲೇಜುಗಳು	೭ ಕೋಟಿ
ಉಪಾಧ್ಯಾಯರ ಪೆನ್ಶನ್ ಫಂಡ್ ಮತ್ತು ಶಿಕ್ಷಣಕ್ರಮದ ಪರಿಶೀಲನೆ	೧೦ ಕೋಟಿ
ಪಿಟ್ಸ್‌ಬರ್ಗಿನಲ್ಲಿ ಕಾರ್ನೆಗೀ ಶಾಸ್ತ್ರಶೋಧನ ಶಾಲೆ	೮,೫೦,೦೦೦೦೦
ವಾಷಿಂಗ್ಟನ್ನಿನಲ್ಲಿ ಕಾರ್ನೆಗೀ ಶಾಸ್ತ್ರಶೋಧನ ಶಾಲೆ	೩,೫೦,೦೦೦೦೦
ಕಾರ್ನೆಗೀ ವೀರರ ಫಂಡ್	೩,೭೫,೦೦೦೦೦
ಜನಾಂಗಗಳಲ್ಲಿ ಮೈತ್ರಿಯ ಪ್ರಚಾರಣೆ	೩,೫೦,೦೦೦೦೦
ಸ್ಕಾಟ್ಲೆಂಡಿನಲ್ಲಿ ಯೂನಿವರ್ಸಿಟಿಗಳಿಗೆ	೩.೫೦,೦೦೦೦೦
ಇಂಗ್ಲೆಂಡ್ ಪುಸ್ತಕಭಂಡಾರಗಳಿಗೆ	೩,೫೦,೦೦೦೦೦
ಕೆಲಸಗಾರರ ಪೆನ್ಶನ್ ಫಂಡ್	೧,೫೦,೦೧೦೦೦
ಚರ್ಚುಗಳಿಗೆ	೨ ಕೋಟಿ
ಡನ್‌ಫರ್ಮ್ಲೀನ್ ನಗರಾಭಿವೃದ್ಧಿಗೆ	೧.೨೫.೦೦೦೦೦
ಚರ್ಚುಗಳಲ್ಲಿ ಮೈತ್ರಿಯ ಉಪದೇಶಕ್ಕೆ	೭೫.೦೦,೦೦೦
ಹೇಗ್ ಪಟ್ಟಣದಲ್ಲಿ ಮೈತ್ರಿಯ ಅರಮನೆ	೫೦,೦೦೦೦೦
ಯುದ್ಧಕಾಲದ ರೆಡ್‌ಕ್ರಾಸ್ ಫಂಡ್	೫೦,೦೦೦೦೦
ಕೆಂಟೋನ್‌ಮೆಂಟ್ ಪುಸ್ತಕಭಂಡಾರಗಳಿಗೆ	[illegible]
ನ್ಯೂಯಾರ್ಕ್ ಕಾರ್ನೆಗೀ ಇನ್‌ಸ್ಟಿಟ್ಯೂಟ್	[illegible]
ಯುದ್ಧಕಾಲದಲ್ಲಿ ಇತರ ಧರ್ಮಗಳಿಗೆ	೪೦,೦೦೦೦೦
ಸಮಗ್ರ [illegible]	[illegible]
ಕಿಂಗ್ ಎಡ್ವರ್ಡ್ ಆಸ್ಪತ್ರೆ	೧೮,೦೦೦೦೦
ಚರ್ಚಿನ ಪಾದರಿಗಳಿಗೆ ಪೆನ್ಶನ್ ಫಂಡ್	೧೦,೦೦೦೦೦

(ವಿ ಬ.)

ಪರಿಣಾಮ!

ಲೇಖಕರು:—ಶ್ರೀ. ಕಂದಕ ಈಶ್ವರ.

"ನೋಡು! . . . ."

"ನೋಡಿದ್ದೇನೆ."

"ಕೇಳು! . . . ."

"ಕೇಳಿದ್ದೇನೆ."

"ಹಾಗಾದರೆ . . . . .?"

"ಹಾಗಾದರೆ? ಏನು ಹಾಗೆಂದರೆ? ಹೇಳಲಿಲ್ಲವೇ? ಎಂದಿಗೂ, ಎಂದೆಂದಿಗೂ ಇಲ್ಲ! ಸಾಧ್ಯವೇ ಇಲ್ಲ!!"

ರಾಜುವು ಕೋಪದಿಂದ ಕುಳಿತಲ್ಲಿಂದ ಎದ್ದು ಸ್ವಲ್ಪ ಮುಂದೆ ಬಂದನು. ತರುಣಿಯು ಮಾತ್ರ ನಿಂತಲ್ಲೇ ನಿಂತಿದ್ದಳು. ಕ್ಷಣಕಾಲ ನೀರವ. ಪುನಃ ತರುಣಿಯು ಹೇಳತೊಡಗಿದಳು.—"ನೋಡು, ನನ್ನ ಅವಸ್ಥೆಯನ್ನು ನೋಡು. ನಾನೀಗ ಗರ್ಭಿಣಿ, ನಿನಗೇ ತಿಳಿದಿದೆ. ನಿನ್ನಿಂದಾಗಿ ನಾನು ಗರ್ಭಿಣಿ, ನೋಡು, ನೀನೇ ನನ್ನ ಕೈ ಬಿಟ್ಟರೆ ನಾನೇನು ಮಾಡಬೇಕು?

"ಬೇಕಾದರೆ ಬಾವಿಗೆ ಹಾರು! ನೀನೇನಾದರೆ ನನಗೇನು?"

ತರುಣಿಗೆ ತಡೆಯಾಗಲಿಲ್ಲ. ಅವಳೀ ಮೊದಲೆಷ್ಟೊ ಸಲ ಬೇರೆ ಮದುವೆಯಾಗುವೆನೆಂದು ಹೇಳಿಕೊಂಡಿದ್ದಳು, ಬೇಡಿಕೊಂಡಿದ್ದಳು. ಆದರೆ ಅದೆಲ್ಲವೂ ನಿಷ್ಫಲ! ನಾರಿಯು ಮಾರಿಯಾದಳು. ಕೋಪದಿಂದ ಉನ್ಮತ್ತಳಾಗಿ ಅಡಗಿಸಿಟ್ಟಿದ್ದ ಚೂರಿಯನ್ನು ತೆಗೆದಳು, ತೋರಿಸಿದಳು. ಬಹಳ ಸಾರಿ ಹೇಳಿದಳು, ಕೇಳಿದಳು. ಆದರೆ ರಾಜುವಿನ ಕಲ್ಲಿನ ಹೃದಯುವು ಕರಗಲಿಲ್ಲ. ಅವನು ನಕ್ಕನು ಮಾತ್ರ. ಅವನಾ ರಾಕ್ಷಸೀ ನಗುವು ಬೆಂಕಿಗೆ ತುಪ್ಪವನ್ನು ಹಾಕಿದಂತಾಯಿತು. ಹರಿದ ಹೃದಯುವನ್ನು ಇರಿದಂತಾಯಿತು. ಬಾಲೆಯು ಚೂರಿಯಿಂದ ತಿವಿದಳು.

* * * *

ಮರುದಿನ ಬೆಳಿಗ್ಗೆ. ಬಾವಟೆ ಗುಡ್ಡೆಯಲ್ಲಿ ಎಲ್ಲೆಲ್ಲೂ ಜನರೇ! ಪೋಲಿಸ್—ಇನ್ಸ್‌ಪೆಕ್ಟರರೆಲ್ಲರೂ ಬಂದರು. ನೋಡಿದರು, ರಾಜುವಿನ ಶವ. ಎದೆಯಲ್ಲಿ ಗಾಯುಗಳಿವೆ. ತಿರುಗು ಮುರುಗಿಸಿ ನೋಡಿ, ಕೇಳಬೇಕಾದವರಿಂದೆಲ್ಲಾ ಕೇಳಿಕೊಂಡು, ತಮ್ಮ ಪುಸ್ತಕಗಳಲ್ಲೆಲ್ಲಾ ಬರೆದುಕೊಂಡು ಇನ್ಸ್‌ಪೆಕ್ಟರರು ಶವವನ್ನು ಆಸ್ಪತ್ರೆಗೆ ಸಾಗಿಸಿ ತಾವೂ ಹೊರಟರು. ಜನಸಂದಣಿಯೂ ಶವವನ್ನು ಹಿಂಬಾಲಿಸಿತು.

ಸರಕಾರೀ ಆಸ್ಪತ್ರೆಯುಲ್ಲಿ ಶವವನ್ನು ಪರೀಕ್ಷಿಸಿದರು. ಆತ್ಮಹತ್ಯೆಯಾದುದಲ್ಲ. ಕೊಲೆಯಾದುದೆಂದು ಡಾಕ್ಟರರು ಅಭಿಪ್ರಾಯ ಪಟ್ಟರು. ಪೋಲಿಸ್ ಅಧಿಕಾರಿಗಳು ರಾಜುವಿನ ತಂದೆಗೆ ಪತ್ರವನ್ನು ಬರೆದು, ಪತ್ತೆಗೆ ಮೊದಲು ಮಾಡಿದರು.

* * * *

ರಾಜು—ಅವನೊಬ್ಬ ತರುಣನು. ಊರು ಕಾರ್ಕಳದಲ್ಲಿ. ತಂದೆಗೆ ಬೇಕಾದಷ್ಟು ಆಸ್ತಿಯಿತ್ತು. ಅದರಿಂದಾಗಿಯೇ ಅವನು—ಎಳೆತನದಲ್ಲೇ ತಾಯಿಯು ಸತ್ತಿದ್ದರೂ ಮುದ್ದಿನಿಂದ ಸಾಕಲ್ಪಟ್ಟನು. ಹುಡುಗನಾಗಿದ್ದಾಗ ಊರ ಶಾಲೆಯಲ್ಲೇನೋ ಏಳನೆಯ ತರಗತಿಯ ತನಕ ಕಲಿತನು. ಆದರೆ ಮುಂದೆ? ತಂದೆಯು ಮಗನ ಮೇಲಿನ ಪ್ರೀತಿಯಿಂದ, ತನ್ನ ಮಗನು ಇನ್ನೂ ಕಲಿಯಲೆಂಬ ಆಶೆಯಿಂದ ವಿದ್ಯೆ ಕಲಿಯಲು ಮಗನನ್ನು ಮಂಗಳೂರಿಗೆ ಕಳುಹಿಸಿದನು. ರಾಜುವು ತನ್ನ ತಂದೆಯ ಹಣದಿಂದಾಗಿ ಶಾಲೆಯದೇ ಹೊಸ್ಟೇಲಿನಲ್ಲಿ ಊಟ ಮಾಡಿಕೊಂಡು ವಿದ್ಯೆಯನ್ನು ಕಲಿಯುತ್ತಿದ್ದನು.

ರಾಜುವು ಎಂಟನೆಯ ಹಾಗೂ ಒಂಭತ್ತನೆಯ ತರಗತಿಯುಲ್ಲಿ ಎರಡೆರಡು ವರ್ಷ ಕಲಿತು ಹೇಗೂ ಹತ್ತನೆಯ ಕ್ಲಾಸಿಗೆ ಬೀಳಿಸಲ್ಪಟ್ಟನು. ವರ್ಷದಿಂದ ವರ್ಷಕ್ಕೆ ಅವನ ಖರ್ಚು ಏರುತ್ತಾ ಹೋಗುತಿತ್ತು. ಆದರೂ ತಂದೆಯು, ಮಗನು ಕೇಳಿದಂತೆಲ್ಲಾ ಹಣವನ್ನು ಕಳುಹಿಸುತ್ತಲೇ ಇದ್ದನು. ಅದರಿಂದಾಗಿ ರಾಜುವಿನ ಮೋಜು ಬಹಳ ಬೆಳೆಯುತ್ತಿತ್ತು. ಅವನು ಮೆಟ್ರಿಕ್ಯುಲೇಶನ್ ಕ್ಲಾಸಿಗೆ ಬೀಳುವಾಗ ಎಲ್ಲವನ್ನೂ ಅಭ್ಯಾಸ ಮಾಡಿಕೊಂಡೇ ಬಂದನು. ನಾಟಕ, ಸಿನೆಮ ಒಂದನ್ನೂ ಬಿಡದಾದನು. ಕಾಫಿ ಹೊಟೇಲು, ಸಿಗರೇಟ ಪೆಟ್ಟಿಗೆ, ಅದು—ಇದು ಎಲ್ಲವನ್ನೂ

ಅರಿತುಕೊಂಡನು. ಒಂದೇ ಮಾತಿನಿಂದೆನ್ನುವುದಾದರೆ, ತನ್ನ ಹಳೆಯ ಕೂದಲನ್ನು ಕತ್ತರಿಸಿ, ಹಳ್ಳಿಯ ಉಡುಗೆ ಬಿಟ್ಟು ಕೊಟ್ಟು, ಕ್ರಾಪುಗೀಪು ಬಾಚಿಕೊಂಡು, ಸೆಂಟುಗಿಂಟು ಹಾಕಿಕೊಂಡು, ಹೇಟುಬೂಟು ತೊಟ್ಟುಕೊಂಡು ಶುದ್ಧ ಇಂಗ್ಲಿಷರ ಮಗನಾಗಿ ಪೇಟೆಯೆಲ್ಲಾ ಸುತ್ತಲು ಮೊದಲು ಮಾಡಿದನು.

ರಾಜುವು ಕಲಿಯುತ್ತಿದ್ದುದು 'ಮಾಡಿಗೆ ಹಂಚು ಹಾಕಿದ ಅದೊಂದು ಶಾಲೆಯಲ್ಲಿ. ಅವನ ಶಾಲೆಯಲ್ಲಿ ಹುಡುಗಿಯರು ತುಂಬಾ. ಅವರಲ್ಲೊಬ್ಬಳ ಮೇಲೆ ರಾಜುವು ಕಣ್ಣು ಹಾಕಿದನು. ಅವಳು ಸುಂದರಿ. ಎತ್ತರವೂ ಅಲ್ಲ. ಗಿಡ್ಡವೂ ಅಲ್ಲ. ಹದ ತರದ ದೇಹ. ದಪ್ಪವೂ ಅಲ್ಲ; ತೆಳುವೂ ಅಲ್ಲ; ಹದ ತರದ ಮೈಕಟ್ಟು. ಅವಳ ಮೈಬಣ್ಣವು ಬಿಳಿದಲ್ಲ. ಕೆಂಪಲ್ಲ:— ಅವೆರಡೂ ಕೂಡಿದ ಹಳದಿ ಮಿಶ್ರಿತ ಸುಂದರ ವರ್ಣ. ಗುಂಗುರು ತಲೆಕೂದಲಿಂದ, ನಗೆಯ ದುಂಡು ಮೊಗದಿಂದ, ತುಂಬಿದ ಎದೆಯುಬ್ಬಿನಿಂದ, ಬಡ ನಡುವಿನಿಂದ, ಅವಳು ಸುಂದರಿ. ಅವರ್ಣನೀಯ ಸುರೂಪಿಣಿ. ರಾಜುವು ಅವಳ ಮೇಲೆ ಕಣ್ಣು ಹಾಕಿದನು. ಅವನ ಬಲೆಗೆ ಮೊದಲಾಗಿ—ಬೇಗನೇ ಅವಳು ಬೀಳದಿದ್ದರೂ, ಮೆಲ್ಲಮೆಲ್ಲನಾಗಿಯೇ ಸಲಿಗೆಯ ಮಾತುಗಳಿಗೆಡೆಕೊಟ್ಟು ಅವನ ಕೈಸೆರೆಯಾದಳು. ಎಂದು ಅವಳು ಅವನ ಬಲೆಗೆ ಬಿದ್ದು ಬಿಟ್ಟಳೋ, ಅಂದಿನ ಮೊದಲ್ಗೊಂಡು ಅವಳು ರಾಜುವಿನ ಸಂಗಡ ಸಿನೆಮಕ್ಕೋ, ಬಾವಟೆಯ ಗುಡ್ಡೆಗೋ, ಹೊಳೆಯ ತೀರಕ್ಕೋ ಹೋಗ ಹತ್ತಿದಳು.

* * * *

ದೂಮಪ್ಪನವರು ರಿಟಾಯರ್ಡ್ ಪೋಲಿಸ್ ಇನ್ಸ್ಪೆಕ್ಟರರು. ಅವರ ಮನೆಯು ಕದ್ರಿಯಲ್ಲಿ. ಅವರ ಮುಖ ವಿಂದು ಕಳೆಗುಂದಿದೆ,—ನಿಸ್ತೇಜವಾಗಿದೆ. ಅವರೊಮ್ಮೆ ಔಡು ಗಚ್ಚುವರು. ಇನ್ನೊಮ್ಮೆ ಎಡ ಅಂಗೈಗೆ ಬಲಮುಷ್ಟಿಯಿಂದ ಬಡೆಯುವರು. ಮಗದೊಮ್ಮೆ ಕೈಯಲ್ಲಿನ ಪತ್ರವನ್ನು ಓದುವರು. ಒಂದಲ್ಲ ಹಲವು ಬಾರಿ ಓದುವರು. ಏರಿ ತಪಿಸುವರು. ಪತ್ರವು ಈ ರೀತಿಯಲ್ಲಿತ್ತು:-

ಪ್ರಿಯ ತಂದೆಯವರೇ, ತಾ. 1-4-33.

ಬರೆಯಲು ಕೈಯು ಅಲುಗುತ್ತಿದೆ! ಹೃದಯವು ನಡುಗುತ್ತಿದೆ!! ಮನಸ್ಸು ಮುದುಡುತ್ತಿದೆ!!—ಏಕೆ? ಏಕೋ! ಏನನ್ನು ಬರೆಯಲಿ? ಸಮಾಜದ ಕ್ರೂರತನವನ್ನೇ, ಯುವಕರ ಮೊಸಳೆ ನಗುವನ್ನೇ, ಬಾಲೆಯರ ಹಾಳು ಬಾಳನ್ನೇ! ಹೌದು. ಯುವಕರ ಕತ್ತರಿ ಹೃದಯದಿಂದಾಗಿ ಬಾಲೆಯರ ಬಾಳು ಹಾಳು! ಅದು ಚೂರು ಚೂರು! ಹಾ! ಅಪ್ಪಾ! ಏನೆಂದು ಬರೆಯಲಿ? ನನ್ನ ತಪ್ಪನ್ನಾವ ಕೈಯಿಂದ ಬರೆಯಲಿ? ತಮಗೆ ನೋವಾಗದೇ? ನೋವಾದರೆ ನಾನು ಮಾಡಲೇನು? ಕಟುಕ ಹೃದಯಿಯೊಬ್ಬನು ನನ್ನನ್ನು ವಂಚಿಸಿ ಮೋಸಪಡಿಸಿದನು. ಅವನು ನನ್ನನ್ನು ಬಲೆಯಲ್ಲಿ ಬೀಳಿಸಿ, ಕೆಡಿಸಿ, ಹಾಳು ಮಾಡಿ ಕಡೆಗೆ ವಂಚಿಸ ನೋಡಿದನು. ಅಂತಹ ನೀಚನನ್ನು-ಕ್ರೂರನನ್ನು ನಾನೇನು ಮಾಡಬೇಕು? ಆ ರಾಜು ನನ್ನ ಕ್ಲಾಸಿನ ವಿದ್ಯಾರ್ಥಿ. ಅವನೇ ನನ್ನನ್ನು ಕೆಡಿಸಿದನು. ತಮಗೆ ತಿಳಿಯದಂತೆ ಅವನ ಅನುಚಾರಿಣಿಯಾಗಿ ನಾನು ಅವನಿಂದ ಕೆಟ್ಟು ಹೋದೆನು. ಆದರೆ—ಆದರೆ—ನಾನಾಗಿ ಹಾಳು ದಾರಿಗೆ ಬಿದ್ದುದಲ್ಲ. ಅವನು ಎಳೆದು ಬೀಳಿಸಿದ್ದು. ಆ ಕ್ರೂರನನ್ನು ಕೊಂದೆನು. ಆ ದುಷ್ಟನು ಸಮಯಕ್ಕೆ ತಕ್ಕ ಸವಿ ನುಡಿಯನ್ನಾಡಿ ನಿನ್ನನ್ನೇ ಮದುವೆಯಾಗುವೆನೆಂದು ಭಾಷೆ ಕೊಟ್ಟು, ನಾನು ಗರ್ಭಿಣಿಯಾದುದನ್ನು ತಿಳಿದು ಹಾಳು ಸಮಾಜಕ್ಕೆ ಹೆದರಿ, ನನಗಿತ್ತ ಭಾಷೆಯಿಂದ ತಪ್ಪಿಸ ನೋಡಿದನು. ದುಷ್ಟ ಗಂಡಸರು ಅಗತ್ಯ ಬಿದ್ದಾಗ ಮಾತ್ರ 'ಪವಿತ್ರ ಪ್ರೇಮ, ಸ್ವರ್ಗಧಾಮ' ಎಂದೆಲ್ಲ ಹೇಳಿ, ಪ್ರಸಂಗವು ತಮ್ಮ ಮೇಲೆ ಬೀಳ ಬಂದಾಗ ಹಿಂದು ಮುಂದು ನೋಡದೆ, ಆ ಪವಿತ್ರ ಪ್ರೇಮಕ್ಕೆ, ಆ ಸ್ವರ್ಗಧಾಮಕ್ಕೆ ಕಿಚ್ಚು ಹಚ್ಚ ನೋಡುವರು. ಸಮಾಜವು ಕೂಡ ಗಂಡಸರನ್ನನುಸರಿಸಿಯೇ ಕುಣಿಯುತ್ತಿದೆ. ನಾನು ಬಸುರಿಯಾಗಿ ಇಲ್ಲಿಯೇ ನಿಲ್ಲುವುದಾದರೆ ಸಮಾಜದವರು ನನ್ನನ್ನು ಜಾತಿಯಿಂದ ಬಹಿಷ್ಕರಿಸುತ್ತಿದ್ದರು. ಕಠಿಣ ತರದಿಂದ ನಿಂದಿಸಿ, ಮೂದಲಿಸಿ, ನನ್ನ ಕತ್ತನ್ನೆತ್ತ ಬಿಡುತ್ತಿದ್ದಿಲ್ಲ. ಆದರೆ ಆ ರಾಜುವನ್ನು ಬದುಕಗೊಡುತ್ತಿದ್ದರೆ ಅದೇ ಸಮಾಜದವರು 'ಹುಷಾರ್ ಹುಡುಗ, ಚಲೋ ಹುಡುಗಿಗೆ ಕೈಕೊಟ್ಟ. ಏನಪ್ಪಾ ಇವನ ಸಾಮರ್ಥ್ಯ, ಸ್ನೇಹ ಮಾಡಿದರೆ ಅಂತಹ ಹುಡುಗಿಯದೇ ಸ್ನೇಹ ಮಾಡಬೇಕಯ್ಯ!' ಎಂದೆಲ್ಲಾ ಅಂದು, ಅವನ ಬೆನ್ನು ತಟ್ಟುತ್ತಿದ್ದರು. ಅವರ ಬೆನ್ನು ತಟ್ಟುವಿಕೆಯನ್ನು ನಿಲ್ಲಿಸಲಿಕ್ಕಾಗಿ ನಾನವನ ಎದೆ ತಟ್ಟಿದೆ. ಆದರೆ ಅಪ್ಪಾ! ತಮಗೆ ಹೆದರಿಯಲ್ಲ; ತಾಯಿಗೆ ಬೆದರಿಯಲ್ಲ; ಆ ಕ್ರೂರ ಸಮಾಜಕ್ಕೆ—ಕ್ರೂರ ಸರಕಾರಕ್ಕೆ ಹೆದರಿ ನಾನಿಂದೇ ಮನೆಬಿಟ್ಟು ತೆರಳುವೆನು. ತಾವು ಭಯಪಡುವ ಅಗತ್ಯವಿಲ್ಲ. ನನಗಾಗಿ ದುಃಖಿಸುವ ಕಾರಣವಿಲ್ಲ. ನನ್ನನ್ನು ಕ್ಷಮಿಸಿರಿ. ಕ್ಷಮಿಸಲಾರಿರೇ? ನನಗಿನ್ನು ಕ್ಷಮಿಸಿಕೊಳ್ಳಬೇಕೆಂಬ ಆಶೆಯೂ ಇಲ್ಲ. ಇಂತಿ ತಮ್ಮ ನಿರ್ಭಾಗ್ಯೆ,

ನೀಲಾ.

ಅಂಜೀರು.

ಮೂಲ ಲೇಖಕರು:—ಶ್ರೀ. ಮಾಧವ ವೆಂಕಟೇಶ ಮಂಗಸೂಳಿ; ಅನುವಾದಕರು:—ಶ್ರೀ. ಬಿ. ಕಲ್ಯಾಣ ಶರ್ಮರು.

ಇವರ ಲೇಖಕರು ಅಚ್ಚ ಕನ್ನಡಿಗರು. ಇವರ ಮೂಲನಿವಾಸವು ಅಥಣೀ ತಾಲೂಕಿನಲ್ಲಿರುವ ಮಂಗಸೂಳಿ ಗ್ರಾಮವು. ಕನ್ನಡಿಗರಿದ್ದು ಇವರು ಮರಾಠೀ ಸಾಹಿತ್ಯ ಸೇವಕರಲ್ಲಿ ಹೆಸರು ಪಡೆದಿದ್ದಾರೆ. ಒಳ್ಳೇ ಕವಿಗಳೆಂದು ವಿಖ್ಯಾತರಾಗಿದ್ದಾರೆ. ಇವರ "ಭಿಕಾರೀಣ" ಎಂಬ ಸಣ್ಣ ಕಾವ್ಯವು ಮರಾಠೀ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದು, ಅದು ಮೂರನೆಯ ಆವೃತ್ತಿಯನ್ನು ಕಂಡಿದೆ. ಅವರು ಎಷ್ಟೋ ಕಥೆಗಳನ್ನು ಬರೆದು ಅವುಗಳನ್ನು ಪ್ರಸಿದ್ಧಿಸಿದ್ದಾರೆ. ಅದರಂತೆಯೇ, ಕೆಲವು ನಾಟಕಗಳನ್ನೂ ಬರೆದಿದ್ದಾರೆ. ಆದರೆ, ತಮಗೆ ಕನ್ನಡವು ಬರುವುದಿಲ್ಲವೆಂದು ಅವರು ಬಲು ನೊಂದುಕೊಳ್ಳುತ್ತಿರುವರು ಕನ್ನಡ ಕಲಿಯಬೇಕೆಂದು ಅವರಿಗೆ ಇದೀಗ ಕುತೂಹಲವುಂಟಾಗಿದೆ. ತಮ್ಮ ಕೃತಿಗಳು ಕನ್ನಡದಲ್ಲಿಯೂ ಪ್ರಸಿದ್ಧಿಸಲ್ಪಡಬೇಕೆಂದು ಅವರ ಅಪೇಕ್ಷೆ. ಅವರು ಬರೆದ "ಅಂಜೀರು" ಎಂಬ ಸಣ್ಣ ಕತೆಯನ್ನು ಈ ಕೆಳಗೆ ಕೊಟ್ಟಿದೆ:— (ಅರುಣೋದಯ.)

ಕಡು ಕಾಯಿಲೆಯಿಂದ ಬಳಲುವ ಕನಕನು—'ಅಪ್ಪಾ, ಇಂದಾದರೂ ಅಂಜೀರ ಹಣ್ಣನ್ನು ತಂದು ಕೊಡುವಿಯಾ?' ಎಂದು ಕಲ್ಲನನ್ನು ಕೇಳಿದನು.

ಕಲ್ಲನು ಕನಕನ ತಂದೆ. ಅವನು ಕೂಲಿ—ಕಂಬಳಿಯನ್ನು ಮಾಡಿ, ಮೂರು ಜೀವಗಳನ್ನು ಕಾಪಾಡುವ ಬಡಪಾಯಿಯಾಗಿದ್ದನು.

ಈ ಹರಕು ಮುರಕು ಬಾಳುವೆಯ ಮಂಗಲ ದೇವತೆಯಾದ ಮಲ್ಲವ್ವನು, ತನ್ನ ಎಳೆ ಮಕ್ಕಳಾದ ಕನಕಕಲ್ಲವ್ವರನ್ನು ಬಿಟ್ಟು ಸತ್ತು ಇಂದಿಗೆ ವರುಷವಾಗಿತ್ತು. ಆದುದರಿಂದ ಆ ಕಂದಗಳನ್ನು ಕಾಪಾಡುವ ಹೊಣೆಯನ್ನು ಕಲ್ಲನು ಕೈಕೊಳ್ಳಬೇಕಾಗಿತ್ತು.

ಕನಕನಿಗೆ ಕಾಯಿಲೆಯಾಗಿ ಇಂದಿಗೆ ಎಂಟು ದಿನಗಳಾಗಿದ್ದುವು. ಮೈಮೇಲೆ ಕೈಯಿಟ್ಟರೆ, ಕಾವಿಗೆ, ಕೈಯು ಚುರುಗುಟ್ಟುತ್ತಿತ್ತು. ಇಂಥ ಬೇನೆಯ ಮಗುವನ್ನು ಮನೆಯಲ್ಲಿಟ್ಟು ಕೂಲಿಗೆ ಹೋಗುವುದಾದರೂ ಹೇಗೆ? ಕಲ್ಲವ್ವನಿಗೆ ಒಪ್ಪಿಸಬೇಕೆಂದರೆ ಅವಳೂ ಚಿಕ್ಕವಳೇ! ಒಟ್ಟಿಗೆ ಕಲ್ಲನಿಗೆ ಸಂಕಟವೇ ಬಂದಿತ್ತು. ಅವನು ತನ್ನ ಬಳಿಯಲ್ಲಿದ್ದ ಒಂದೇ ರೂಪಾಯಿಯಿಂದ ಅಂತೂ ಇಂತೂ ಈ ಎಂಟು ದಿನಗಳನ್ನು ಕಳೆದಿದ್ದನು. ಇಂದು ಅವನ ಬಳಿಯಲ್ಲಿ ಒಂದು ಒಡಕು ಕಾಸು ಕೂಡ ಇದ್ದಿಲ್ಲ. ಕನಕನಂತೂ ಅಂಜೀರು ಹಣ್ಣಿಗಾಗಿ ಹಂಬಲದ ಹಟವನ್ನೆ ಹಿಡಿದಿದ್ದನು. ಹಿಂದಕ್ಕೊಮ್ಮೆ, ಎಂದೊ ಕಲ್ಲನಗೂಡ ಹೋದಾಗ ಅಂಜೀರ ಹಣ್ಣನ್ನು ಕಂಡಿದ್ದನು. ಈ ದಿನ ಕಲ್ಲನ ಕರುಳು ಕಲ್ಲನ ಮುರಿಗೆಯಾದುವು. ತನ್ನ ಹರಕು ಬಾಳುವೆಗಾಗಿ ಹೇಸಿಗೆವುಂಟಾಯಿತು! ಅವನ ಮನಸ್ಸಿನಲ್ಲಿ ನಾನು, ಹಗಲಿರುಳು ನೆತ್ತರವು ನೀರಾಗುವಂತೆ ದುಡಿದರೂ ನನ್ನ ಕಂದಗಳಿಗೆ ತುತ್ತುಕೂಳು, ಗೇಣು ಬಟ್ಟೆಯೂ ಸಿಗಬಾರದೆ? ಮಗುವು ಬೇನೆಯಿಂದ ಬಳಲಿ ಬೇಡಿದ ಸೊಟ್ಟ ಅಂಜೀರ ಹಣ್ಣನ್ನೂ ಕೊಡುವುದಾಗಬಾರದೇ? ಅಯ್ಯೋ! ಎಂಥ ನನ್ನ ಹೊಲಸು ಬಾಳುವೆಯಿದು! ಎಂದು ಯೋಚಿಸಿ, ಒಂದು ನಿಟ್ಟುಸಿರು ಬಿಟ್ಟನು. ಮತ್ತು ಮೂಲೆಯಲ್ಲಿ ಬಿದ್ದಿರುವ ಹರಕು ಅಂಗಿಯನ್ನು ಹಾಕಿಕೊಂಡು, ತಲೆಗೆ ಚಿಂದಿಯೊಂದನ್ನು ಸುತ್ತಿ, ಹೊಟ್ಟೆಯ ಪಾಡಿಗಾಗಿ ಹೊರಗೆ ಹೊರಡತಕ್ಕವನು;— ಅಷ್ಟರಲ್ಲಿ ಕಲ್ಲವ್ವನು—ಅಪ್ಪಾ, ನನಗೆ ಹಸಿವೆಯಾಗಿದೆ' ಎಂದು ತಂದೆಯನ್ನು ಅಡ್ಡಗಟ್ಟಿದಳು. ಆಗ ಕಲ್ಲನು ಹುಚ್ಚಾದನು. ಏನೂ ತಿಳಿಯದಂತಾಯಿತು. ಮುರುಕು ಮನೆಯನ್ನೆಲ್ಲಾ ಹುಡುಕಿದನು; ಆದರೆ ಮಗಳಿಗೆ ಕೊಡಲು ಏನೂ ಸಿಗಲಿಲ್ಲ! ಆಗ ಅವನು ತನ್ನ ಹಣೆಬರಹವನ್ನು ಹಳಿಯ ಹತ್ತಿದನು. ಆದರೆ ಅದರಿಂದ ಕಲ್ಲವ್ವನ ಹಸಿವೆಯು ಹಿಂಗುವದೆಂತು? ಇಷ್ಟರಲ್ಲಿ ಒಂದು ಸಂದಿಯಲ್ಲಿ ಏನೋ ಕಟ್ಟಿಟ್ಟ ಗಂಟು ಅವನ ಕಣ್ಣಿಗೆ ಬಿತ್ತು. ಅವನು ಅವಸರದಿಂದ ಅದನ್ನು ತಕ್ಕೊಂಡು ಬಿಚ್ಚಿದನು. ಅದರಲ್ಲಿ ಒಣಗಿ ಕಟಕಾದ ಒಂದು ತುಣುಕು ರೊಟ್ಟಿಯಿತ್ತು! ಅದನ್ನು ನೀರಿನಲ್ಲಿ ನೆನೆಯಿಟ್ಟು ಕಲ್ಲವ್ವನಿಗೆ ತಿನ್ನ ಹೇಳಿ, ತಾನು ಬರುವ ವರೆಗೆ ಕನಕನ ಬಳಿಯಲ್ಲಿಯೇ ಕೂಡಲು ಸೂಚಿಸಿ ಹೊರ ಬಿದ್ದನು.

* * * *

ಒಂದು ಅಚ್ಚುಕಟ್ಟಾದ ಕೋಣೆ—ಟೇಬಲ್ಲಿನ ಮೇಲೆ ಅಚ್ಚ ಬಿಳೀ ಬಣ್ಣದ ಅರಿವೆಯು ಹಾಸಿದ್ದು ಅದರ ಮೇಲೆ ಕಪ್ಪು ಬಸಿಗಳೂ, ಹಲವು ತಿಂಡಿಯ ಪದಾರ್ಥಗಳೂ ಇಡ

ಲಾಗಿದ್ದುವು. ನಡು ಹರೆಯದ ಒಬ್ಬ ಗೃಹಸ್ಥನು ಕರವಸ್ತ್ರದಿಂದ ಮೋರೆ ಒರಸಿಕೊಳ್ಳುತ್ತ ಅಲ್ಲಿಗೆ ಬಂದು ಕುರ್ಚಿಯ ಮೇಲೆ ಕುಳಿತುಕೊಂಡನು. ಅವನ ಹಿಂದಿಂದ್ದೇ ಮೂವರು ಮುದ್ದು ಮಕ್ಕಳು ಬಂದು ಟೇಬಲ್ಲಿನ ಸುತ್ತಲೂ ಕುಳಿತುಕೊಂಡುವು. ಎಲ್ಲರೂ ಅಲ್ಲಿಟ್ಟ ತಿಂಡಿಯನ್ನು ತಿನ್ನ ಹತ್ತಿದರು. ಇಷ್ಟರಲ್ಲಿ ಒಬ್ಬ ಬಡಪಾಯಿಯಾದ ಮುದುಕನು ತೇಕುತ್ತ ಅಲ್ಲಿಗೆ ಬಂದು, ಒತ್ತಟ್ಟಿಗೆ ಜೋಲು ಮೋರೆ ಮಾಡಿಕೊಂಡು ನಿಂತನು. ಮಕ್ಕಳಿಂದೊಡಗೂಡಿ ಚಹ ಕುಡಿಯುತ್ತಿರುವ ಗುರು ರಾಯರು ಅವನನ್ನು ನೋಡಿ–

"ನೀನು ಯಾರು?"

"ರಾಯರೇ, ನಾನು ಕಲ್ಲನು."

"ಈಗೇಕೆ ಬಂದಿರುವಿ?"

"ರಾಯರೇ, ನನ್ನ ಹಾಡು ಹೇಳಲು, ನಾಲಿಗೆಯೇ ಬರುವುದಿಲ್ಲ. ಇಂದಿಗೆ ಎಂಟು ದಿನಗಳಾದುವು.–-ಕನಕನು ಕಾಯಿಲೆಯಿಂದ ಕಂಗೆಟ್ಟಿರುವನು! ನಾನೂ ಕೂಲಿಗೆ ಹೋಗಿಲ್ಲ. ಹಾಗೂ ಹೀಗೂ ಎಂಟು ದಿನಗಳನ್ನು ಕಳೆದೆನು. ಇಂದಿಗೆ ಎಲ್ಲವೂ ಕಟ್ಟಾಗಿದೆ! ಕೈಗಡ ಯಾರೂ ಕೊಡುವುದಿಲ್ಲ. ರಾಯರೇ, ಅಂತೇ ತಮ್ಮ ಕಡೆಗೆ ಓಡಿ ಬಂದೆ. ನಾಲ್ಕು ದಿನಗಳ ಕೂಲಿ ಹನ್ನೆರಡಾಣೆಗಳು ತಮ್ಮಿಂದ ಬರತಕ್ಕವಿರುವುವು. ಅವುಗಳನ್ನು ಈಗ ಕೊಟ್ಟರೆ, ಬಡವನಿಗೆ ಉಪಕಾರ ಮಾಡಿದಂತಾಗುವುದು!"

"ನೀನು ನಮ್ಮಲ್ಲಿ ಎಂದು ಕೂಲಿಗೆ ಬಂದಿರುವೆ?"

"ರಾಯರೇ, ಆ ಮಾತಿಗೆ ಇಂದು ತಿಂಗಳಾಯಿತು."

"ಏನಾದರೂ ಬೊಗಳುವಿ! ಸುಮ್ಮನೆ ಹೊರಟು ಹೋಗು! ನಾನು ನಿನಗೆ ಏನೂ ಕೊಡತಕ್ಕದ್ದಿಲ್ಲ!"

"ರಾಯರೇ, ಹೀಗೆ ಬಡವರ ಹೊಟ್ಟೆಯ ಮೇಲೆ ಒಳಿ ಕೊಡಬೇಡಿರಿ! ಎಂಟು ದಿನಗಳ ಹಿಂದೆ ಕೇಳಲಿಕ್ಕೆ ಬಂದಾಗ, 'ನಾಲ್ಕು ದಿನ ತಡೆದು ಬಾ!' ಎಂದು ಹೇಳಿದ್ದಿರಿ. ಈಗ ಮಗುವಿಗೆ ಜ್ವರ ಬಂದದ್ದರಿಂದ ಬರೋಣಾಗಲಿಲ್ಲ. ರಾಯರೇ, ಕ್ಷಮಿಸಿರಿ! ಬಡವನನ್ನು ಬರೆಗೈಯಿಂದ ಕಳಿಸಬೇಡಿರಿ! ಸದ್ಯಕ್ಕೆ ನಾಲ್ಕಾಣೆಗಳನ್ನಾದರೂ ಕೊಡಿರಿ."

"ಎಷ್ಟು ಸುಳ್ಳು ಮಾತಾಡುವಿಯೋ? ನಮ್ಮಲ್ಲಿ ನೀನು ಕೂಲಿಗೇ ಬಂದಿಲ್ಲ! ಹಣವೆಲ್ಲಿಯದು?"

"ರಾಯರೇ, ನಾನು ಬಡವನಿದ್ದರೂ ಸುಳ್ಳು ಮಾತಾಡುವವನಲ್ಲ. ತಾಯಿ ತಂದೆ, ದೇವರ ಆಣೆ ಇಟ್ಟು ಹೇಳುತ್ತೇನೆ! ತಮ್ಮ ಕಡೆಗೆ ನಾಲ್ಕು ದಿನಗಳ ಕೂಲಿ ಹನ್ನೆರಡಾಣೆ ಬರತಕ್ಕವವೆ!"

"ನೀನೂ, ನಿನ್ನ ಮಕ್ಕಳೂ, ದೇವರೂ ಎಲ್ಲರೂ ಸತ್ತರೂ ನನಗೇನೂ ಸೂತಕ ಬರುವುದಿಲ್ಲ! ವರ್ಷದ ಕೊನೆಯಲ್ಲಿ ಲೆಕ್ಕ ಮಾಡುವಾಗ ಅಪ್ಪಿ ತಪ್ಪಿ ನಿನ್ನ ಹೆಸರಿನಿಂದ ಏನಾದರೂ ಕೊಡುವುದು ಹೊರಟರೆ ನೋಡೋಣವಂತೆ! ಈಗ ಏನೂ ಸಿಗಲಾರದು."

"ರಾಯರೇ, ಬೆಲ್ಲ, ಫುಟಾಣೆ ತಿಂದು ನೀರು ಕುಡಿಯಲಿಕ್ಕೆ ಒಂದಾಣೆಯನ್ನಾದರೂ ಕೊಡಿರಿ."

"ಒಮ್ಮೆ ಹೇಳಿದರೂ ಅಷ್ಟೇ. ಸಾವಿರ ಸಲ ಹೇಳಿದರೂ ಅಷ್ಟೇ. ಸುಮ್ಮನೆ ಹೊರಟು ಹೋಗು; ಇಲ್ಲದಿದ್ದರೆ ಮೈಮುರಿ ಬಡಿಸಿಕೊಳ್ಳುವಿ."

"ರಾಯರೇ, ಮೈಮುರಿ ಬಡೆಯುವ ಬೆದರಿಕೆ ಹಾಕುವುದು ತಮ್ಮಂಥವರಿಗೆ ಸರಿದೋರುವುದೋ? ಎರಡು ಬಿಲ್ಲಿಗಳನ್ನಾದರೂ ಕೊಡಿರಿ. ನನ್ನ ಕನಕನಿಗೆ ಅಂಜೂರ ಹಣ್ಣು ಕೊಂಡುಕೊಳ್ಳಬೇಕಾಗಿದೆ."

"ಆ ನಿನ್ನ ಬಡ ಮುಂಡೇ ಮಗನಿಗೆ ಅಂಜೂರ ಹಣ್ಣು ಏತಕ್ಕೆ ಬೇಕು? ನಮ್ಮಂಥ ದೈವುಳ್ಳವರ ಮಕ್ಕಳು ಅಂಥ ಹಣ್ಣುಗಳನ್ನು ತಿನ್ನುವುದು! ನಿನ್ನ ಮಗನಿಗೆ ಹಣ್ಣು ಕೊಡುವದಕ್ಕಿಂತ ವಿಷ ಕೊಟ್ಟು ಕೊಂದುಬಿಡು; ಅಂದರೆ, ನಿನ್ನ ಹಿಂದಿನ ಇದಿಯಾದರೂ ಬಿಟ್ಟೀತು."

"ರಾಯರೇ! ಬಡವರ ಮಕ್ಕಳಿಗೆ ಇಂಥ ಕಾಡು ಶಬ್ದಗಳನ್ನು ಆಡಬಾರದು! ನಾನೇ ಈ ನಿಮ್ಮ ಮುದ್ದು ಮಕ್ಕಳಿಗೆ ಹೀಗೆ ಮಾತಾಡಿದ್ದರೆ, ಅದು ನಿಮಗೆ ಸಹನವಾಗುತ್ತಿತ್ತೇ? ನೀವು ನನ್ನ ಗಂಟಲೊಡೆದು ಬಿಡುತ್ತಿದ್ದಿರಿ."

ಈ ಶಬ್ದಗಳು ಗುರುರಾಯರ ಕಿವಿ ಮುಟ್ಟುತ್ತಲೆ ಅವರ ಕಣ್ಣುಗಳು ಕೆಂಡದಂತಾದುವು. ಅವರು, ಕೈಯೊಳಗಿನ ಕಪ್ಪನ್ನು ಕಸುವಿನಿಂದ ಕಲ್ಲಪ್ಪನ ಮೇಲೆ ಬಿಸುಟಿದರು; ಅದು ಹಣೆಗೆ ಬಡೆದು ಗಾಯವಾಗಿ ನೆತ್ತರವು ಸೋರ ಹತ್ತಿತು. ಆದರೂ ಅವನು ಅದೇ ಸ್ಥಿತಿಯಲ್ಲಿ ರಾಯರ ಕಾಲು ಹಿಡಿದು,–"ಬಿರಿಮಾತುಗಳಾಡಿದ್ದಕ್ಕೆ ಕ್ಷಮಿಸಬೇಕು. ಬೇಕಾದರೆ ಕಾಲೊಳಗಿನ ಪಾಪೋಸಿನಿಂದ ಶಿಕ್ಷೆಯೆಂದು

ನಾಲ್ಕು ಏಟುಗಳನ್ನು ಕೊಟ್ಟರೂ ಚಿಂತೆಯಿಲ್ಲ. ಆದರೆ, ಎರಡು ಬಿಲ್ಲಿಗಳನ್ನು ಮಾತ್ರ ಕೊಡಿರಿ'' ಎಂದನು.

ಕಲ್ಲಿದೆಯ ಗುರುರಾಯರು ನ್ಯಾಯವಾಗಿ ಕೊಡಬೇಕಾದ ಕೂಲಿಯನ್ನಂತೂ ಕೊಡಲೇ ಇಲ್ಲ. ಇಷ್ಟೇ ಅಲ್ಲ. ಆ ಬಡಪಾಯಿಯನ್ನು ಒದ್ದು ಮನೆಯಿಂದ ಹೊರ ದೂಡಿದರು.

ದತ್ತಗೇಡಿಯಾದ ಕಲ್ಲನು ಹಣೆಗೆ ಕೈ ಹಚ್ಚಿ ಬರೆಗೈಯಿಂದ ಹಾಗೆ ಹೊರಟನು. ಬಿಸಿಲಿನ ಕಾವಿನಿಂದ ಬವಳಿಕೆ ಬಂದು ಎಲ್ಲಿಯಾದರೂ ನೆರಳಲ್ಲಿ ನಾಲ್ಕು ನಿಮಿಷ ಕೂಡಬೇಕೆಂದು ಅತ್ತಿತ್ತ ನೋಡುವಷ್ಟರಲ್ಲಿ, ಒಂದು ಮುಳ್ಳುಗಳ್ಳಿಯ ಕಂಟಿಯು ಅವನ ಕಣ್ಣಿಗೆ ಬಿತ್ತು. ಅದರ ನೆರಳಿಗೆ ಅವನು ಹೋಗಿ ಕೆಲಹೊತ್ತು ಕುಳಿತುಕೊಂಡನು. ತುಸು ಎಚ್ಚರ ಬಂದ ಮೇಲೆ-"ದೇವರೇ ಈ ದೀನ ಅನಾಥನ ಮೊರೆಯು ನಿನಗೆ ಕೇಳಲೊಲ್ಲದೇ? ದೀನಬಂಧುವೇ, ಈಗಾದ ಕಾಟವು ನಿನಗೆ ಸಾಕಾಗಿಲ್ಲವೇ? ದುಡಿದ ಕೂಲಿ ಬೇಡ ಹೋದರೆ ಮೈಮುರಿ ಬಡಿಸಿಕೊಳ್ಳಬೇಕಾಯಿತು. ಇದೇ ನಿನ್ನ ನ್ಯಾಯವೋ? ಇನ್ನು ನನ್ನ ಕನಕನಿಗೆ ಅಂಜೂರ ಹಣ್ಣನ್ನು ಎಲ್ಲಿಂದ ಕೊಡಲಿ? ''

* * * *

ಕಲ್ಲನು ಮನಸ್ಸಿನಲ್ಲಿ ಏನೋ ಯೋಚಿಸಿ, ಮುಳ್ಳುಗಳ್ಳಿಯ ಒಂದೆರಡು ಹಣ್ಣುಗಳನ್ನು ಕೊಯ್ದುಕೊಂಡು ಒತ್ತರದಿಂದ ಮನೆಗೆ ಬಂದನು. ಕನಕನಿಗೆ ತಂದೆಯು ಬಂದ ಸುಳಿವು ಹತ್ತಿದ ಕೂಡಲೇ ಅವನು ಒಮ್ಮೆಲೆ–ಅಪ್ಪಾ! ಅಂಜೂರ ಹಣ್ಣು ತಂದೆಯಾ? ಎಂದು ಕಿರಬಿದನು.

"ಮಗೂ, ಇಕೊಳ್ಳು ಅಂಜೂರ ಹಣ್ಣು" ಎಂದು ತಾನು ತಂದ ಮುಳ್ಳುಗಳ್ಳಿಯ ಹಣ್ಣನ್ನು ಮಗುವಿನ ಕೈಯಲ್ಲಿ ಕೊಟ್ಟನು. ಆಗ ಕನಕನಿಗೆ ಜ್ವರವು ಮಿತಿಮೀರಿದ್ದರಿಂದ, ಹಣ್ಣು ಕೈಯಲ್ಲಿಟ್ಟ ಕೂಡಲೇ ಅವನಿಗೆ ಹರುಷವಾಯಿತು.

"ಅಪ್ಪಾ, ಇವೇ ಅಂಜೂರ ಹಣ್ಣುಗಳೋ?"

"ಹೌದು! ಮಗೂ, ನಮ್ಮ ಬಡವರ ಅಂಜೂರ ಹಣ್ಣುಗಳು ಇವೇ!"

"ಅಪ್ಪಾ! ಇವು ಎಷ್ಟು ಸವಿಯಾಗಿವೆ! ನಾನು ತಂಗಿಗೆ ಒಂದೂ ಕೊಡುವುದಿಲ್ಲ. ನಾನೇ ಎಲ್ಲವನ್ನೂ ತಿನ್ನತಕ್ಕವನು''ಎಂದು ಕನಕನು ಎರಡನೇ ಹಣ್ಣನ್ನುಬಾಯಿಯಲ್ಲಿ ಹಾಕಿಕೊಳ್ಳುವಷ್ಟರಲ್ಲಿ ಅವನ ಜೀವವು ದೇಹದಿಂದ ಬೇರೆಯಾಯಿತು!

ಮಾರ್ಚಿ ತಿಂಗಳ ಒಗಟಿಗೆ ಉತ್ತರ ಬರೆದವರು.

ಶ್ರೀಯುತರುಗಳಾದ 1. ಎಮ್. ಕುಪ್ಪಯ ಕೋಟ್ಯಾನ್, ಮುಂಬಾಯಿ. 2. ಕೆ. ಬಾಬು ಟೈಲರ್, ಮಂಗಳೂರು. 3. ಎಮ್. ಗೋವಿಂದ ಶೇಣೈ, 210 ಮಡ್‌ಫೋರ್ಟ್, ಸಿಖಂದರಬಾದ್. 4. ಎನ್. ಆರ್. ಪ್ರಭು, ಮಟ್ಟಿಕಾರ್, ಬೋಳೂರು. 5. ಪಿ. ವಿ. ನಾಗರಾಜ ಶೆಟ್ಟಿ, ಹೊಳೆನರಸೀಪುರ. 6. ಪಿ. ವಿ. ವರದುರಾಜ ಶೆಟ್ಟಿ, ಹೊಳೆನರಸೀಪುರ. 7. ಕೆ. ಎನ್. ದಾಮೋದ ಶಿಮೊಗ್ಗ. 8. ಕೆ. ಟಿ. ಕರ್ಕೇರ, ಮುಂಬಾಯಿ. 9. ಶ್ರೀಮತಿ ರುಕ್ಕು ಬ್ಯಾ, ಸುರತ್ಕಲ್. ಬಾಬು, ಟೀಚರ್, ಸುರತ್ಕಲ್. 11. ತಿಮ್ಮಪ್ಪ ಮುಲ್ಯ, ಕಂದಕ. 12. ದತ್ತ ಮುಲ್ಯ, ಕಂದಕ. 13. ಎನ್. ಎಸ್. ಬೋಳೂರು. 14. ಬಿ. ಬಾಲಕೃಷ್ಣ, ಅತ್ತಾವರ. 15. ಬಿ. ದೇವಪ್ಪ ಕುಂದಲಾಯ, ಹೆಡ್‌ಮಾಸ್ಟರ್, ಪೊಲಿಪ್ಪುಸ್ಕೂಲ್, ಕಾಪು. 16. ಕೆ. ಕೃಷ್ಣಯ್ಯ ಶೆಟ್ಟಿ, ವಿದ್ಯಾರ್ಥಿ, B. H. E. ಶಾಲೆ, ಕಾಪು. 17. ಸಿ. ಶ್ರೀನಿವಾಸ ಮುಲ್ಯ, ಗೋಳಿಕಟ್ಟಾ ಬಜಾರ್. 18. ಎಸ್. ಕೋದಂಡಧರ, ಕೆಂಟೋನ್‌ಮೆಂಟ್ ರೋಡ್. 19. ಪಸಾರಿ ವಿಠ್ಠಲ್ ಪ್ರಭು, ಗೋಳಿಕಟ್ಟಾ ಬಜಾರ್.

ಬಿಚ್ಚುಗರೊಳಗೆ ಸೋಡ್ತಿ ಎತ್ತಲಾಗಿ, ಸುವರ್ಣ ಪದಕವು ನಂಬ್ರ 7ನೇಯವರಿಗೆ ಸಿಕ್ಕಿರುತ್ತದೆ.

ಮೂಲ್ಕಿಯಲ್ಲಿ ಶ್ರೀ ಕೋಟಿಕೇರಿ ಪೂವಪ್ಪನವರ ಅಧ್ಯಕ್ಷತೆಯಲ್ಲಿ ಬಿಲ್ಲವ ಸಮಾಜ ಸೇವಾ ಸಂಘ ಎಂಬುದನ್ನು ಬಿಲ್ಲವ ಸಮಾಜದವರು ಸ್ಥಾಪಿಸಿ ಬಡ ಸ್ವಜಾತಿ ಬಾಂಧವರಿಗೆ ಸಹಾಯವನ್ನೀಯಲು ಮುಂದುವರಿದುದು ಸಂತೋಷದ ವಿಷಯ.

ಬಿಹಾರ್ ಭೂಕಂಪದ ಸಹಾಯಕ್ಕಾಗಿ ಮುಂಬಾಯಿಯ ಕರ್ಣಾಟಕ ನೂತನ ಸಂಗೀತ ಸಭೆಯವರು ಇದೇ ತಾ. 24-4-'34ನೇ ರಾತ್ರಿ 9 ಘಂಟೆಗೆ 'ಚವತಿಯ ಚಂದ್ರ' ಎಂಬ ನಾಟಕವನ್ನು ಆಡಲಿರುವರು. ಎಲ್ಲರೂ ಸಹಕರಿಸಬೇಕಾಗಿ ಅರಿಕೆ.

The Prophet of a New Dawn and his Message.

By K. LAXMAN, B. A., Retired Police Officer.

Sree Narayana Gurudev was the herald of the dawn of a new era. His mission was to inaugurate a new world, composed of a human society, reconstructed on the new basis of the universal principles-"One caste, one religion, one God." Few have rightly understood his message. Even his followers have practically made no advance in the direction, which he pointed out to them. The world has yet to understand the scope of his teachings. To the world, he is merely the Founder of the temple movement for the benefit of his community, while to his followers, he is only the deliverer of their community from the degradation of ages. His ardent advocacy of temple-worship has given rise to many misconceptions regarding his real mission. It is true he advocated temple-worship but that was merely as a means to a higher end and no more. He admitted its usefulness only, as far as it went to elevate and purify the life of his followers. He considered the temples necessary, only so far as they served as aids to healthy living and as a place of ennobling thoughts and spiritual association. The condition of his community was at the time such, that he felt that they required such temporary aids for their spiritual and social advancement, but he wanted them to throw away those crutches, as soon as they found them to be no longer necessary. His aim in establishing and consecrating temples was to use them simply as a stepping stone to a higher form of worship, and a common platform of worship for people of all caste, colour or creed for the merging of their social differences. He wanted his followers to offer their worship first in temples, and next in the temple of their hearts. That was, why he exhorted them to put up temples in their hearts and worship God within them. As for himself he attached no sanctity to organised faith and worship. His utterances go to show that he openly disowned all allegiance to any particular creed or faith. He recognised no hard and fast distinctions among the different religions. To him they were in essence one. He felt as a Hindu with the Hindu, as a Christian with the Christian, and as a Muhammadan with the Muhammadan. His teachings were so liberal and tolerant, that the followers of other religions found nothing prejudicial to the faith in the acceptance of those teachings,and theyfound in him an embodiment of their respective ideals, and felt no reluctance to acclaim him as their Teacher. He openly avowed that he did not belong to any caste or community, and he claimed kinship with the whole world. To him all were brothers, and God was the Common Father. He admitted freely into his ranks people of all caste, colour or creed, and of all persuations, without any distinction, and his followers claimed among them Hindus, Budhists, Christians, Harijans, athiests and agnostics.

The gospel of Gurudev "One caste, one religion, one God" aimed at the founding of a new world, with the ideals of liberty, equality and fraternity, which that message conveyed, as the corner stones for its foundation. He held forth the equalisation of opportunities

(*See Page* 15)

ಸ್ವೀಕಾರ ಮತ್ತು ವಿಮರ್ಶೆ.

ಮೈಸೂರು ದಸರಾ ಎಕ್ಸಿಬಿಶನ್ ಒಫಿಶಿಯಲ್ ಹೇಂಡ್ ಬುಕ್ ಮತ್ತು ಗೈಡ್—ಇದು ಕೈ ಸೇರಿರುವುದು. ಇದರಲ್ಲಿ, ಉಪಯುಕ್ತ ವಿಷಯಗಳ ಮೇಲೆ ಬರೆದ ಲೇಖನಗಳಿವೆ. ಮಾತ್ರವಲ್ಲ, ಬೆಲೆ ಬಾಳುವ ಅನೇಕಾನೇಕ ಭಾವ ಚಿತ್ರಗಳೂ ಇವೆ. ಈ ರೀತಿಯ ಪುಸ್ತಕವನ್ನು ಪ್ರಕಟಿಸುವುದರಿಂದ ಜನತೆಗೊಂದು ಉಪಕಾರವೇ ಸರಿ!

ಮಹಾತ್ಮಾ ಗಾಂಧಿ-ಇದು 'ಬಾಲಮಿತ್ರ' ಇವರಿಂದ ಮಕ್ಕಳ ಸಲುವಾಗಿ ಬರೆಯಲ್ಪಟ್ಟು ಬೆಳಗಾಂವಿಯ 'ಒಂದಾಣೆ ಮಾಲೆ'ಯ ಸಂಚಾಲಕರಿಂದ ಪ್ರಕಟಿಸಲ್ಪಟ್ಟಿತು. 'ಒಂದಾಣೆ ಮಾಲೆ'ಯ ಚಂದಾದಾರರಿಗೆ ಉಚಿತ. ಇತರರಿಗೆ ಬೆಲೆ ಆಣೆ ೪. ಇದನ್ನು ಚಿಕ್ಕ ಮಕ್ಕಳು ಅನಾಯಾಸವಾಗಿ ಓದುವಂತೆ ಸುಲಭ ಶೈಲಿಯಲ್ಲೇ ಬರೆದಿರುವುದು ಮಾತ್ರವಲ್ಲ; ಮಕ್ಕಳ ಮನೋರಂಜನೆಗಾಗಿ ಅಲ್ಲಲ್ಲಿ ಮಹಾತ್ಮರ ಭಾವ ಚಿತ್ರಗಳನ್ನೂ ಕೊಟ್ಟಿರುತ್ತಾರೆ. ಈ ಪುಸ್ತಕವನ್ನು ನಾಳೆಯ ಮಕ್ಕಳು ಮಾತ್ರವಲ್ಲ, ಇಂದಿನ ಯುವಕರೂ ಓದಬೇಕಾಗಿದೆ.

ಜನಮರ್ಲ್—ಇದು ತುಳು ಭಾಷೆಯಲ್ಲಿ ಬರೆದು ಕನ್ನಡ ಲಿಪಿಯಲ್ಲಿ ಅಚ್ಚುಗೊಳಿಸಿದ ನಾಟಕ ಪುಸ್ತಕ. ಲೇಖಕರು ಶ್ರೀ ಮಾಧವ ತಿಂಗಳಾಯರು. ಪ್ರಕಾಶಕರು ಎಸ್. ಯು. ಪಣಿಯಾಡಿ, ತುಳುನಾಡ್ ಛಾಪಖಾನೆ, ಉಡುಪಿ. ಬೆಲೆ ೦—೬—೦. ಇದನ್ನು ರಂಗಭೂಮಿಗೆ ತರಬೇಕೆಂಬ ಉದ್ದೇಶದಿಂದ ಅಲ್ಲಲ್ಲಿ ಪದ್ಯಗಳನ್ನೂ ಸೇರಿಸಿ ಪ್ರಕಟಿಸಿರುವರು. ಈ ನಾಟಕವು ಅಜ್ಞಾನಾಂಧಕಾರದಲ್ಲಿರುವವರನ್ನು ಎಚ್ಚರಿಸಿ, ಸುರಾಪಾನಿಗಳಿಗೆ ನೀತಿ ಬೋಧಿಸಿ, ಪ್ರೇಮ ವಿವಾಹವನ್ನು ಸಮರ್ಥಿಸಿ, ಸ್ತ್ರೀ ವಿದ್ಯಾಭ್ಯಾಸವನ್ನು ಪುರಸ್ಕರಿಸಿ ಅಂತ್ಯಗೊಳ್ಳುವುದು. ತುಳು ಭಾಷೆಯನ್ನರಿತಿರುವ ಪ್ರತಿಯೋರ್ವನೂ ಓದತಕ್ಕ ಪುಸ್ತಕವಾಗಿರುವುದು. ಪ್ರತಿಯೋರ್ವ ತುಳುವನೂ ಇದನ್ನು ಬರಮಾಡಿಕೊಂಡು, ತುಳು ಭಾಷೆಯ ಅಭಿವೃದ್ಧಿಗೆ ಹೆಣಗಾಡುತ್ತಿರುವ ಶ್ರೀ. ಎಸ್. ಯು. ಪಣಿಯಾಡಿಯವರಿಗೆ ನೆರವಾಗಲಿ.

ಕಥಾಕುಂಜ ಇದು ಪುಟ್ಟಶ್ಯಾಮರಾಯರ ಸಂಪಾದಕತ್ವದಿಂದ ಬೆಳಗಾಂವಿಯಿಂದ-ಹೊರಡುವ ಸಚಿತ್ರ ಮಾಸ ಪತ್ರಿಕೆ. ವಾ. ಚ.ಅಂಚೆ ವೆಚ್ಚ ಸೇರಿ ರೂ. ೨—೪—೦. ಇದರ ಪ್ರಥಮ ವರ್ಷದ ಪ್ರಥಮ ಸಂಚಿಕೆಯು ನಮ್ಮ ಕೈ ಸೇರಿರುವುದು. ಇದರಲ್ಲಿ ಉತ್ತಮ ಕತೆ, ಕವಿತೆಗಳನ್ನು ಒಳ್ಳೇ ಸಾಹಿತಿಗಳಿಂದ ಬರೆಸಿ, ಪ್ರಕಟಿಸಿರುವರಲ್ಲದೆ, ಕೆಲ ಪುಟಗಳನ್ನು ಮಕ್ಕಳಿಗಾಗಿಪ್ರತ್ಯೇಕಿಸಿಟ್ಟಿರುವರು. ಕನ್ನಡಿಗರಅಭಾವವಿರುವ ಬೆಳಗಾಂವಿಯಲ್ಲೂ ಕನ್ನಡ ಸೇವೆಯನ್ನು ಕೈಕೊಂಡಿರುವ ಇದರ ಸಂಪಾದಕರಿಗೆ ಒತ್ತಾಸೆಯನ್ನೀಯುವುದು ಪ್ರತಿಯೋರ್ವ ಕನ್ನಡಿಗನ ಪ್ರಥಮ ಕರ್ತವ್ಯವಿದೆ.

ಬಿಲ್ಲವರ ಎಸೋಸಿಯೇಶನ್, ಮುಂಬ್ಯಾ-ಇದರ ದ್ವಿತೀಯ ವಾರ್ಷಿಕ ವರದಿಯು ಕೈಸೇರಿರುವುದು. ಬಿಲ್ಲವರು ಮುಂಬಾಯಿಯಲ್ಲಿ ತಾವು ಒಂದು ಸಂಸ್ಥೆಯನ್ನೇರ್ಪಡಿಸಿ, ಸ್ವಜಾತ್ಯಾಭಿವೃದ್ಧಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿರುವರೆಂದು ಈ ವರದಿಯಿಂದ ತಿಳಿದು ಬರುವುದು. ಈ ಸಂಸ್ಥೆಯನ್ನೇರ್ಪಡಿಸಿ, ಬಡ ವಿದ್ಯಾರ್ಥಿಗಳೀರ್ವರಿಗೆ ವಿದ್ಯಾ ವೇತನ ಕೊಟ್ಟಿರುವರು. ಇನ್ನಿತರ ಅನಾಥರಿಗೆ ಇನ್ನಿತರ ಸಹಾಯವನ್ನೂ ಮಾಡಿರುತ್ತಾರೆ. ಮುಂದಕ್ಕೂ ಈ ಸಂಸ್ಥೆಯಿಂದ ಬಡವರಿಗೆ ಹೆಚ್ಚಿನ ಸಹಾಯವನ್ನು ದೊರಕಿಸಿ ಕೊಡುವಂತೆ ಸ್ವಜಾತಿ ಬಾಂಧವರು ಸಹಕರಿಸಲೆಂದು ನಮ್ಮ ಪ್ರಾರ್ಥನೆ.

ಮೂಡಬಿದ್ರೆಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಪ್ರಥಮ ವರ್ಷದ ವರದಿಯು ಹಸ್ತಗತವಾಗಿದೆ. ವಾಚನಾಭಿರುಚಿಯನ್ನು ಹೆಚ್ಚಿಸಿ, ಜ್ಞಾನಾಭಿವೃದ್ಧಿಯನ್ನೆಸಗಲು ಇದೊಂದು ಉತ್ತಮ ಸಾಧನ. ಒಂದೇ ವರ್ಷದಲ್ಲಿ ಹೆಚ್ಚಿನ ಏಳಿಗೆಯನ್ನು ಪಡೆದ ಈ ಸಂಸ್ಥೆಯಿಂದ ಮುಂದಕ್ಕೆ ಜನತೆಗೆ ಹೆಚ್ಚಿನ ಲಾಭವಾಗಬೇಕಾದುದರಿಂದ ಇದಕ್ಕೆ ಊರ ಪರ ಊರ ಮಹಸೀಯರು ಉದಾರ ದಾನ ಮಾಡಬೇಕಾಗಿ ಅರಿಕೆ.

ದಿ ಮೆಜಿಸ್ಟಿಕ್ ಕಾಫಿ ಹೊಟೇಲ್, ಮಂಗಳೂರು. ಇವರ 1934ನೇ ಇಸವಿಯ ಸುಂದರ **ಕೆಲೆಂಡರನ್ನೂ,**

ದಿ ಕೆನರಾ ವಾಚ್ ವರ್ಕ್ಸ್, ಮಂಗಳೂರು ಇವರ 1934ನೇ ಇಸವಿಯ ಚಲೋದಾದ ಕೆಲೆಂಡರನ್ನೂ, ಎನ್. ಜಿ. ಸುವರ್ಣ, ಮಂಗಳೂರು ಇವರ 1934ನೇ ಇಸವಿಯ ಅಂದವಾದ ಕೆಲೆಂಡರನ್ನೂ, ದಿ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು ಇವರ ಜೀವಾಮೃತ ಕೆಲಂಡರನ್ನೂ, ದಿ ಗವರ್ನಮೆಂಟ್ ಸೋಪ್ ಫೆಕ್ಟರಿ, ಬೆಂಗಳೂರು ಇವರ 1934ನೇ ಇಸವಿಯ ಹನ್ನೆರಡು ಚಿತ್ರಗಳಿಂದೊಡಗೂಡಿದ ಅತ್ಯಮೋಘವಾದ ಕೆಲಂಡರನ್ನೂ ಶಾರದಾ ಪ್ರೆಸ್, ಮಂಗಳೂರು ಇವರ 1934ನೇ ಇಸವಿಯ ಪೊಕೆಟ್ ಡೈರಿಯೊಂದನ್ನೂ ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು ಸಿಟಿ–ಇದರಲ್ಲಿ ಕನ್ನಡ ಸಾಹಿತ್ಯೋತ್ಸವದ ವಿಷಯವೂ, ಬೇಕೆನಿಸುವ ಸಾಹಿತ್ಯ ವಿಚಾರಗಳೂ, ಉತ್ತಮ ಕಥೆ, ಕವಿತೆಗಳೂ ಗಣ್ಯರಿಂದ ಪ್ರಕಟವಾಗುವುವು. ಈ ಪತ್ರಿಕೆಯ ಪ್ರಕಟಣೆಯು ಕನ್ನಡಿಗರಿಗೊಂದು ಹೆಮ್ಮೆಯ ವಿಷಯ. ಇದಕ್ಕೆ ನೆರವಾಗುವುದೂ ಅವರ ಕರ್ತವ್ಯ. ಬಿಡಿ ಸಂಚಿಕೆ ಬೆಲೆ ಆಣೆ ೧–೮–೦.

ಆರೋಗ್ಯ ಚಂದ್ರಿಕೆ—ಮಾಸಿಕ ಪತ್ರಿಕೆ. ೩೩ ತಂಬು ಚೆಟ್ಟಿ ಬೀದಿ, ಮದರಾಸು. ಸಂಪಾದಕರು—ಆನರೇಬಲ್ ಡಾ। ಯು. ರಾಮರಾವ್ ಮತ್ತು ಡಾ। ಯು. ಕೃಷ್ಣರಾವ್, ಎಂ. ಬಿ. ಬಿ. ಎಸ್. ವಾರ್ಷಿಕ ಚಂದಾ ರೂ. ೧–೮–೦. ಇದರಲ್ಲಿ ಆರೋಗ್ಯ ವಿಷಯಕ ಲೇಖನಗಳನ್ನು ಸುಲಭ ಹಾಗೂ ಶುದ್ಧ ಭಾಷೆಯಲ್ಲಿ ಪ್ರಕಟಿಸುವರಲ್ಲದೆ, ಸಂಪಾದಕರು ಆರೋಗ್ಯದ ವಿಷಯದಲ್ಲಿ ಚಿಕ್ಕ ಹಾಗೂ ಚೊಕ್ಕ ಕತೆಗಳನ್ನೂ ಬರೆಯುತ್ತಾರೆ; ಚಿತ್ರಗಳನ್ನೂ ಪ್ರಕಟಿಸುತ್ತಾರೆ. ಕನ್ನಡಿಗರ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕ ಪತ್ರಿಕೆ.

ಮಾದಿಗರ ಮಲ್ಲವ— ಬರೆದವರು ಶ್ರೀ ಮುದವೀಡು ಕೃಷ್ಣರಾಯರು. ಪ್ರಕಾಶಕರು "ಒಂದಾಣೆ ಮಾಲೆ" ತುಂಟರತಂಡ ಬೆಳಗಾಂವಿ. ಕತೆಯು ವಿಷಯ ಗರ್ಭಿತವಿದ್ದು ಓದತಕ್ಕದ್ದಿದೆ. ಲೇಖಕರು ಬಡತನದ ಸ್ತ್ರೀಯರ ಪಾತಿವ್ರತ್ಯದ ಅಂತಸ್ತನ್ನು ಕೆಳಗಿಳಿಸದೆ ಮೇಲ್ಮೆಟ್ಟಲಿಗೆತ್ತಿಟ್ಟು ಸ್ತ್ರೀ ಸಮಾಜಕ್ಕೆ ಪಿತೃ ಸ್ವರೂಪರಾಗಿದ್ದಾರೆ. ಕನ್ನಡಿಗರ ಕೈಯ ಕೇಗ್ಗುವಿಕೆಯಿಂದಲೋ, ಏನೋ, ಪುಸ್ತಕದ ಪುಟಗಳು ಕಡಿಮೆಯಾಗಿವೆ. ಸಂಪಾದಕರ ಕಾರ್ಯಕ್ಕೆ ಕನ್ನಡಿಗರು ಕೈಗೊಡಬೇಕಾಗಿದೆ.

ದಿನಕರ—ಮರಾಠಿ ಸಚಿತ್ರ ಮಾಸ ಪತ್ರಿಕೆ. ರತ್ನಾಗಿರಿ ಜಿಲ್ಲೆಯ ಮಾಲ್ವಣದ ಶ್ರೀ ಪಾರಮಾರ್ಥ ಸಾಧನಾಲಯದ ಸಂಸ್ಥೆಯವರಿಂದ ನಡೆಸಲ್ಪಡುತ್ತಿದೆ. ವಾ. ಚ. ರೂ. ೨–೮–೦. ಇದರಲ್ಲಿ 'ಭಿಕ್ಷುವಿನ ಅನುಭವ' 'ಈಶ್ವರೀ ಚಮತ್ಕಾರ' 'ವಿವೇಕ ಸಾಮ್ರಾಜ್ಯ' ಮೊದಲಾದ ಉಚ್ಚತರದ ಲೇಖಗಳಿವೆ. ಅಧ್ಯಾತ್ಮ ವಿಚಾರಗಳನ್ನು ಹರಡಲೆಳಸುವ ಈ ಪತ್ರಿಕೆಯು ಪತ್ರಿಕಾಪ್ರಪಂಚದಲ್ಲಿ ಬಹುಕಾಲ ಬಾಳಿ ಪ್ರಭೆ ಬೀರಲೆಂದೇ ನಮ್ಮ ಪ್ರಾರ್ಥನೆ.

---

continued from page 13.

for all, and free scope for individual growth, as the ingredients of liberty. He proclaimed the subordination of the individual selfseeking to the well being of the race, the humanisation of individual interest to the collective good of all, the absolute surrender and consecration of life to the will of God and the dedication of self to the humane service of mankind, all the embodiments of equality. He held out the fusion of mankind into one brotherhood the maintenance of good-will, peace and fraternal relations within as well as with all outside, as the essentials of fraternity. On such a broad basis, Gurudev sought to reconstruct society. The world would undoubtedly be richer to-day, and society better than what it is now, if only his messages were rightly understood, and the work of the reconstruction of society carried on, on the lines laid down by him.

o o o o

ಧನಿಕ!

(ಭಾ. ಪ)

೧ ಇಳೆಯ ಸೌಖ್ಯ ಮರೀಚಿಕಾಸಿ ।
ರ್ಮಲ ಸಲಿಲ ಪಾನಾಭಿಲಾಷಾ
ನಲವು ದೇಹವನುರಿಸುತಿರೆ ಹೃದಯಾಂತರಾಳದಲಿ.
ಜ್ವಲಿಸಲ್ಕೆ ಸಿರಿಯಾಸೆ ದೀನಾ—
ವಳಿಯೊಡಲ ಪುಡಿಗೈದು ಸಂಪ—
ನ್ನಿಳಯವನು ನೆಲೆಗೊಳಿಪ ನರನೈಶ್ವರ್ಯವಂತನಲಾ!

೨ ಮಧುರತರ ಫಲನಿಚಯದಂತೀ
ವಿದ ಮನೋಹರ ಧನಮಹೀರುಹ—
ವದರ ಮಧುರ ಫಲಾವಳಿಗಳೆಟಕದಿರೆ ಕೈಗಳಿಗೆ ॥
ಉದಿಸಲತ್ಯಾಶಾತರಂಗವು
ಹೃದಯಶರಧಿಯೊಳಕಟ ಬಡಜನ—
ರೆದೆಯ ಮೇಲಡಿಯಿಡುತ ಪಡೆವನು ಧನವ ಧನಿಕನಲಾ ॥

೩ ಮರದ ಮೇಲುದ್ಭವಿಸಿ ಮೇಣದ
ರರಿವ ನುಳಿದು ಕೃತಘ್ನತೆಯಿನಾ—
ಮರದ ರುಧಿರವನುಂಡು ಬಳೆವಾ ಬದನಿಕೆಯ ತೆರದಿ ॥
ತಿರೆಯೊಳೀ ಬಡ ಜನರ ನೆರವೇ
ಸಿರಿಗೆ ಕಾರಣವಾದೊಡೆಯು ಬಡ—
ವರನು ಹಿಂಸಿಸಿ ಮೆರೆವ ನರನೈಶ್ವರ್ಯವಂತನಲಾ!

೪ ಕೂಳಿರದೆ ಕಂಗೆಟ್ಟು ತಪನ—
ಜ್ವಾಲೆಯಲಿ ಬೆಂದಳುಕಿ ಹಸಿವೆಯ
ತಾಳಲಾರದೆ ಬಂದು ಬೇಡುವ ದೀನ ಭಿಕ್ಷುಕನ ॥
ಬಾಳಿನವತೆಯ ಕಂಡೊಡೆಯು ಕೃಪೆ—
ತಾಳದೆಯೆ ಪೊರದೂಡಿಸುತೆ ಸವಿ—
ಗೂಳ ತಿಂದಾಹ್ಲಾದಗೊಂಬಾ ನರನೆ ಧನಿಕನಲಾ!

೫ ಬಡತನದ ಗಾಢಾಂಧಕಾರದೊ—
ಳೆಡವಿ ಬೀಳುತ ಮಡದಿ ಮಕ್ಕಳು—
ಪಡುವ ದುಗುಡವ ಕಂಡು ಬೇವಸಗೊಂಡು ಸಾಲವನು—
ಕಡು ವಿನಯದಿಂ ಬಂದು ಬೇಡುವ—
ಬಡವನಿಗೆ ಬಡ್ಡಿಯನು ಸಲ್ಲದೆ—
ಜಡಿದು ದಂಡನೆ ವಿಧಿಸಿ ಕೊಡುವಾ ನರನೆ ಧನಿಕನಲಾ!

೬ ಅಳಿವ ದೇಹವನೆಚ್ಚಿ ವಿಷಯಾ—
ವಳಿಗೆ ಸೋವತಿಯಾಗಿ ದುರ್ಗುಣ—
ಗಳಿಗೆ ನೆಲೆವನೆಯಾಗಿ ಗರ್ವೋನ್ಮತ್ತ ಮತಿಯಾಗಿ!
ಬಲುಹು ಮಿಗೆ ಮೆರೆದಾಡಿ ಹಿರಿಯರ—
ಹಳಿದು ಪರಮೇಶ್ವರನ ಮಹಿಮಾ—
ವಳಿಯ ಮರೆಯುವ ನಾಸ್ತಿಕನೆ ಭೂತಳದ ಧನಿಕನಲಾ ॥

ಗೋಪಾಲಕೃಷ್ಣ ಅಡಿಗ, ಮೊಗೇರಿ.

ಮೂರನೇ ವರ್ಷಕ್ಕೆ ಈ ಮಾಸಿಕವು ಬೇಕಾದ ಮತ್ತು ಬೇಡವಾದ ಚಂದಾದಾರರು ಹಾಗೆ ತಿಳಿಸಬೇಕು. (ಮೆನೇಜರ್ ಬ. ಬ.)

ಸ್ವಯಂವಾಣಿ.

ಇದು "ಬಡವರ ಬಂಧು"ವಿನ 10ನೇ ಸಂಚಿಕೆ. ಇನ್ನು ಎರಡು ಸಂಚಿಕೆಗಳನ್ನು ನಮ್ಮ ಈ ವರ್ಷದ ವಾಚಕರಿಗಿತ್ತರೆ, ಈ ಎರಡನೆ ವರ್ಷದ ಋಣದಿಂದಲೂ ನಾವು ಮುಕ್ತರಾಗುವೆವು. ಆ ಮೇಲೆ,–

ಜುಲಾಯಿ ತಿಂಗಳಿನಿಂದ ನಮ್ಮ ಮಾಸಿಕದ ಮೂರನೇ ವರ್ಷವಾರಂಭವಾಗುವುದು. ಬರುವ ವರ್ಷದಲ್ಲಿ,– ಈ ಎರಡು ವರ್ಷಗಳ ಅನುಭವವನ್ನು ಸವಿದು, ಪತ್ರಿಕೆಯನ್ನು ಆದಷ್ಟು ಶ್ರೇಷ್ಠತಮವಾಗಿ ಮಾಡಬೇಕೆಂಬ ಬಯಕೆಯಿದೆ- ಪ್ರಥಮದಲ್ಲಿ ನಾವು 16 ಪುಟಗಳನ್ನು ಮಾತ್ರ ಕೊಟ್ಟೆವು; ಎರಡನೆ ವರ್ಷದಲ್ಲಿ 20 ಪುಟಗಳನ್ನು ಕೊಟ್ಟೆವು; ಬರುವ ವರ್ಷದಲ್ಲಿ ಇನ್ನೂ ನಾಲ್ಕಾರು ಪುಟಗಳನ್ನು ಹೆಚ್ಚಿಸಬೇಕೆಂದು ನಿರ್ಧರಿಸಿರುತ್ತೇವೆ. ಅಲ್ಲದೆ, ಸಂಚಿಕೆಯನ್ನು ಸಚಿತ್ರವಾಗಿ ಮಾಡಬೇಕೆಂದೂ ಆಶಿಸಿರುತ್ತೇವೆ.

ಕಳೆದ ತಿಂಗಳ 5ನೇ ತಾರೀಕಿನ ದಿನ ಮೈಸೂರಿನ ಶ್ರೀ ಚಂದ್ರಕಲಾ ನಾಟಕ ಮಂಡಲಿಯವರು "ಬಡವರ ಬಂಧು" ಮತ್ತು "ಬಿಹಾರ್ ಭೂಕಂಪ"ದ ಸಲುವಾಗಿ "ಸದಾರಮೆ" ಎಂಬ ನಾಟಕವನ್ನು ಆಡಿದರು. ಹಲವು ಸಹಾಯ ನಿಧಿಗಳ ಸ್ಪರ್ಧೆಯಿಂದಾಗಿ ರೂ. 345–6–0ರ ಟಿಕೇಟು ಮಾರಿ ಮಂಡಳಿಯವರಿಗೆ ರೂ. 175 ಕೊಡಲ್ಪಟ್ಟಿತು. ಉಳಿದ ರೂ. 170-6–0ರಲ್ಲಿ ಖರ್ಚು ಕಳೆದು ರೂ. 160 ನಮಗೆ ಸಿಗಬೇಕಾಗಿತ್ತು. ಆದರೆ ರೂ. 24 ಇಷ್ಟರ ತನಕವೂ ಹೊರಗೆ ಉಳಿದು ರೂ. 136 ಸಿಕ್ಕಿತು. ಇದರರ್ಧವನ್ನಾದರೂ–ಹೊರಗೆ ಬಾಕಿ ಇರುವ ಹಣ ಶೇಖರಿಸಿ–ಬಿಹಾರಿಗೆ ರವಾನಿಸುವೆವು.

ಮುದ್ರಣ ಸೌಕರ್ಯದೃಷ್ಟಿಯಿಂದ, ಪತ್ರಿಕೆಯ ಆಕಾರವನ್ನು ಇಳಿಸಿದ್ದೇವೆ. ಆಕರ್ಷಕವಾಗುವಂತೆ ದಪ್ಪ ಟೈಪಂಡನ್ನು ಉಪಯೋಗಿಸಿದ್ದೇವೆ. ಮುಂದಕ್ಕೂ ಸುಧಾರಣೆಗಳಾಗಲಿವೆ. ನಮ್ಮ ಪ್ರತಿ ಹೆಜ್ಜೆಯೂ ನಿರ್ದಿಷ್ಟ ಗುರಿಯನ್ನು ತಲಪುವಂತಾಗಲೆಂದು ಕೋರುತ್ತೇವೆ.

ಜುಲಾಯಿ ತಿಂಗಳಲ್ಲಿ ನಮ್ಮ ವಿಶೇಷ ಸಂಚಿಕೆಯನ್ನಾಗಿ ಪ್ರಸಿದ್ಧ ಬರಹಗಾರರ ಕಥೆ ಪುಸ್ತಕವೊಂದನ್ನು ಪ್ರಕಟಿಸಬೇಕೆಂದಿದ್ದೇವೆ.–ಪ್ರೋತ್ಸಾಹವು ಸದಾ ಇರಲಿ!

ಸಂಪಾದಕ.



ಜನವರಿ ಒಗಟನ್ನು ಬಿಚ್ಚಿದವರಲ್ಲಿ ಶ್ರೀ. ನಾಗಪ್ಪ ಸಾಲ್ಯಾನ್, ಏಳ್ಮುಡಿ, ಪುತ್ತೂರು ಇವರು ತನ್ನ ಒಗಟಿನ ಮಧ್ಯೆ ಈ ಮಧ್ಯದ ಚಿತ್ರವನ್ನು ಚಿತ್ರಿಸಿ ನಮಗೆ ಕಳುಹಿಸಿದರು. ಇವರು ಹೆಸರಿನ ಕಲಾಭಿಮಾನಿಗಳಲ್ಲದಿದ್ದರೂ ಸಾಮಾನ್ಯ ಒಗಟಿನಲ್ಲಿ ಇಂತಹ ಸೌಂದರ್ಯಮಯ ಚಿತ್ರವನ್ನು ಬಿಡಿಸುವಷ್ಟು ಸಾಮರ್ಥ್ಯವಂತರಾದುದನ್ನು ನೋಡಿ–ಇವರಿಗೆ ಪ್ರೋತ್ಸಾಹವನ್ನೀಯಬೇಕೆಂದು, ಇವರ, ಈ ಮಧ್ಯದ ಚಿತ್ರವನ್ನು ನಮ್ಮ ವೆಚ್ಚದಿಂದ ಬ್ಲೋಕು ಮಾಡಿಸಿದೆವು. ಚಿತ್ರದ ನಯನದ್ವಯಗಳ ಪ್ರತಿಭೆ, ಹಣೆ ಕೆನ್ನೆಗಳ ತೇಜೋಭರಿತ ಪ್ರಭೆಗಳು ಯಾರನ್ನೂ ಮುಗ್ಧರನ್ನಾಗಿ ಮಾಡುವಂತಹವುಗಳೇ! ಇವರ ಶ್ಲಾಘನೀಯ ಯತ್ನಕ್ಕಾಗಿ ರೂ. 2ನ್ನು ಬಹುಮಾನವಾಗಿ ರವಾನಿಸಿರುವೆವು.

(ಸಂ. ಬ. ಬ.)

ನಗೆಯಾಭರಣ.

ಮಾಡಿದವ—ಕೈಲಾಸದ ಕದಿಮಾಚಾರಿ, ಎಚ್. ಎ. ಎನ್. ಡಿ.

ಮೇಜಿಸ್ಟ್ರೇಟ್—ನಿನಗೆ ಒಟ್ಟೆಷ್ಟು ಪೆಟ್ಟು ಕೊಟ್ಟ?

ವಾದಿ—ಒಟ್ಟು 2 ಇಡೀ, 1 ಅರ್ಧ.

ಮೆ—ಅದು ಹೇಗೋ, ಅರ್ಧ ಪೆಟ್ಟು ಕೊಡುವುದು?

ವಾ—ಮಹಾಸ್ವಾಮಿ! 2 ಪೆಟ್ಟು, ದೊಣ್ಣೆಯಿಂದ ಕೊಡುವಷ್ಟರಲ್ಲಿ ದೊಣ್ಣೆ ಮುರಿಯಿತು. ಬಳಿಕ ತುಂಡಾದ ಅರ್ಧ ದೊಣ್ಣೆಯಲ್ಲಿ ಒಂದು ಪೆಟ್ಟುಕೊಟ್ಟ-

* * * * *

ಒಬ್ಬ—ಕಂಪಾರ್ಟ್‌ಮೆಂಟಿನಲ್ಲಿ ಇಷ್ಟು ಸ್ಥಳ ಖಾಲಿಯಿರುವಾಗ ತಾವು ಕುಳಿತುಕೊಳ್ಳುವುದಿಲ್ಲವೇಕೆ? ಬನ್ನಿ ಕುಳಿತುಕೊಳ್ಳಿ.

ಟಿಕೇಟು ಪಡೆಯದೆ ರೈಲು ಹತ್ತಿದ ತಿಮ್ಮ—ಕ್ಷಮಿಸಿ ಸ್ವಾಮಿ, ನನಗೆ ರೈಲು ನಿಲ್ಲುವುದಕ್ಕೆ ಮುಂಚಿತವಾಗಿಯೆ ಇಳಿದು ಹೋಗಬೇಕಾದ ಅಗತ್ಯ ಕೆಲಸವಿದ್ದುದರಿಂದ ಕುಳಿತುಕೊಳ್ಳಲು ಸಮಯವಿಲ್ಲ.

* * * * *

ತಂದೆ—ಎಲೋ! ನೀನು ಹೀಗೆ ದುಂದುವ್ಯಯ ಮಾಡಲಿಕ್ಕೆ ಯಾರಪ್ಪನ ಗಂಟೋ?

ಮಗ—ನಿಮ್ಮಪ್ಪನ ಗಂಟಲ್ಲ. ನನ್ನಪ್ಪನದೆ ನಾನು ಖರ್ಚು ಮಾಡುತ್ತಿರುವುದು!

* * * * *

ಗುರು—ನಿಮ್ಲ್ಯಾ ಎಲ್ಲಿದೆ? ಏಕೆ ಪ್ರಸಿದ್ಧಿ ಹೊಂದಿದೆ?

ಶಿಷ್ಯ—ಮೂಗಿನಲ್ಲಿದೆ. ಕರೆದಾಗ ಓಡಿಬರುತ್ತದೆ.

* * * * *

ವೆಂಕಂಣ—ಎಲೋ ರಾಮು, ನನ್ನ ಮಗುವು ನನ್ನ ಪೆನ್ಸಿಲು ನುಂಗಿಬಿಟ್ಟಿತು. ನೀನು ಬೇಗ ಹೋಗಿ ಡಾಕ್ಟರರನ್ನು ಕರೆ ತಾ. ನಿನ್ನ ಉಪಕಾರ.

ರಾಮು—ಡಾಕ್ಟರರು ಬರುವ ವರೆಗೆ ನೀವೇನು ಮಾಡುವಿರಿ?

ವೆಂಕಂಣ—ನಾನು ನನ್ನ ಪೌಂಟನ್‌ಪೆನ್ನಿನಿಂದ ಬರೆಯುತ್ತೇನೆ.

* * * * *

ಉಪಾಧ್ಯಾಯ—ಮಳೆಗಾಲಕ್ಕೆ ಹೆಚ್ಚಾಗಿ ಬೆಳೆಯುವ ಬೆಳೆ ಯಾವುದು?

ಹುಡುಗ—ಕೊಡೆಗಳ ಬೆಳೆ ಸಾರ್!

* * * * *

ಮೆಜಿಸ್ಟ್ರೇಟ್—ನಿನ್ನ ಉದ್ಯೋಗವೇನು?

ಕೈದಿ—ನನಗೆ ಕಬ್ಬಿಣ ಕೆಲಸ. ಪರರಿಗುಪಕಾರ ಮಾಡುವುದೇ ನನ್ನ ಧ್ಯೇಯ.

ಮೆ—ಹಾಗಾದರೆ ಮೊನ್ನೆ ಪೋಲೀಸಿನವನು ನಿನ್ನನ್ನು ಹಿಡಿದ ಸಮಯದಲ್ಲಿ ಶರಾಫರಂಗಡಿಯ ಬಾಗಿಲ ಬಳಿಯಲ್ಲೇನು ಮಾಡುತ್ತಿದ್ದೆ?

ಕೈ—ಬಾಗಿಲಿನ ಸ್ಕ್ರೂ ಸಡಿಲವಾಗಿತ್ತು; ಅದನ್ನಷ್ಟು ಬಿಗಿ ಮಾಡುತ್ತಿದ್ದೆ.

* * * * *

ಹಳ್ಳಿಯವನೊಬ್ಬ 'ಸ್ಪೋರ್ಟ್ಸ್' ನೋಡಲಿಕ್ಕೆಂದು ಬಂದಿದ್ದ. ಪ್ರಥಮದ್ದಾಗಿ ಟಗ್ ಓಫ್ ವಾರ್ ಪ್ರಾರಂಭವಾಯಿತು. ಹುಡುಗರು ಹಗ್ಗವನ್ನು ಎರಡೂ ಕಡೆಗಳಿಂದ ಎಳೆಯುವುದನ್ನು ಹಳ್ಳಿಯವನು ಕಂಡು—'ಎಲೋ ಹುಚ್ಚು ಮುಂಡೆಗಳಿರಾ! ಈ ಹಗ್ಗಕ್ಕಾಗಿ ಹೀಗೆ ಬಡೆದುಕೊಳ್ಳುವುದಕ್ಕಿಂತ ಮಧ್ಯದಲ್ಲಿ ಯಾರಾದರೂ ತುಂಡು ಮಾಡಿಬಿಟ್ಟರ್ರಾತಲ್ಲೋ. ಇದಕ್ಕೆ ಜಗಳವೇಕೆ?

* * * * *

ಮಲತಾಯಿ—ಏನೇ? ಹೀಗೇಕೆ ಒದ್ದೆಯಾದಿ?

ಸೀತ—ಅಮ್ಮಾ ನಾನು ಬರುತ್ತಿರುವಾಗ ಫಕ್ಕನೇ ನೀರ ತೋಡಿಗೆ ಬಿದ್ದುಬಿಟ್ಟೆ.

ಮ. ತಾ.—ಬೀಳುವುದಕ್ಕಿಂತ ಮುಂಚೆ ವಸ್ತ್ರವನ್ನು ಬಿಚ್ಚಲಿಕ್ಕೇನು ದಾಡಿ?

ಸೀ—ಬೀಳುತ್ತಿರುವಾಗ ಹೆಚ್ಚಿನ ಸಮಯ ಸಿಕ್ಕಲಿಲ್ಲವಮ್ಮಾ ಕ್ಷಮಿಸು.

* * * * *

ಬ್ರೌನ್ ಸಾಹೇಬ—ನನ್ನ ಸೇವಕನಾಗುವವನಿಗೆ ಮಿತವ್ಯಯ ತಿಳಿದಿರತಕ್ಕದ್ದು.

ಸೇವಕ—ನಾನು ಮಿತವ್ಯಯದವನೇ! ಆದುದರಿಂದಲೇ ಈ ಮೊದಲಿದ್ದ ಕೆಲಸದಿಂದ ನಿವೃತ್ತನಾದುದು.

ಬ್ರೌ. ಸಾ—ಅದು ಹೇಗೆ?

ಸೇ—ಮಿತವ್ಯಯದ ಯೋಚನೆಯಿಂದ ನಾನು ಯಜಮಾನರ ಬಟ್ಟೆಬರೆಗಳನ್ನೇ ಉಟ್ಟುಕೊಳ್ಳುತ್ತಿದ್ದೆ!



ಅಫಘಾನ ಸಂಸ್ಥಾನದಲ್ಲಿ "ಬಲ್ಖ" ಎಂಬ ಹೆಸರಿನ ಹೊಸ ನಗರವೊಂದು ನಿರ್ಮಾಣವಾಗಿದೆ.

ರೈತರಿಗೆ ಕಂದಾಯದಲ್ಲಿ ರಿಯಾಯತಿ ತೋರಿಸ ಬೇಕೆಂದು ಅಸ್ಸಾಮು ಸರಕಾರವು ನಿಶ್ಚೈಸಿದೆ.

ಸರಕಾರೀ ನೌಕರರ ವೇಷದಲ್ಲಿ ೧೨ ಡಕಾಯಿತರು ಪೇಶಾವರದ ಬಳಿ ಡಕಾಯಿತಿ ನಡೆಸಿರುವರು.

ಢಿಲ್ಲಿಯ ಹೊಟೇಲುಗಳ "ಗೈಡ್" ಮಹಾಶಯರು ಮುಷ್ಕರ ಹಿಡಿದಿರುವರು,—ಸಂಬಳ ಕಡಿದರೆಂದು.

ಬೆಲ್ಜಿಯಮ್ ಅರಸರು ಮರಣಪಟ್ಟ ಸ್ಥಳದಲ್ಲಿ (ಗಿರಿ) ಒಂದು ಸ್ಮಾರಕವನ್ನು ಕಟ್ಟುವರು.

ರಂಗೂನಿನಿಂದ ಉಪ್ಪುಸೀರಿನ ಮೀನುಗಳನ್ನು ಕಲ್ಕತ್ತೆಗೆ ಈಗ ವಿಮಾನದಲ್ಲಿ ಕಳುಹಿಸುತ್ತಾರೆ.

ಮುಂಬಾಯಿ ವಿಶ್ವ ವಿದ್ಯಾಲಯದವರು ವಿಲಿಂಗ್ಡನ್ ದಂಪತಿಗಳಿಗೆ "ಡೊಕ್ಟರ್ ಒಫ್ ಲೊಸ್" ಡಿಗ್ರಿಯನ್ನು ದಯಪಾಲಿಸುವರು.

ಜರ್ಮನರಿಗೆ ಅಹಿತವೆಂದು ಕಾಣುವ ಬ್ರಿಟಿಷ್ ಚಲಚ್ಚಿತ್ರಗಳನ್ನು ಜರ್ಮನಿಯಲ್ಲಿ ಪ್ರದರ್ಶಿಸಬಾರದಾಗಿ ಹಿಟ್ಲರರ ಆಜ್ಞೆ.

ಸಿಂಗ್‌ಸಿಂಗಿನ ಜೈಲುಗಳಲ್ಲಿರುವ ಕೈದಿಗಳಿಗೆ ಪ್ರೌಢ ವಿದ್ಯಾಭ್ಯಾಸ ಕೊಡಿಸುವರಂತೆ.

ಹೊಲ್ಲೆಂಡಿನ ಮಹಾಮಾತೃಶ್ರೀಯವರು ಕಳೆದ ತಿಂಗಳಲ್ಲಿ ಕಾಲವಾದರು.

೧೯೩೨–೩೩ರಲ್ಲಿ ಮುಂಬಾಯಿ ಪ್ರಾಂತ್ಯದಲ್ಲಿ ಶಾಸನ ಭಂಗ ಚಳವಳದ ಸಂಬಾಧದಲ್ಲಿ ೧೪,೭೩೧ ಜನರಿಗೆ ಶಿಕ್ಷೆಯಾಗಿದೆ.

ಮದರಾಸಿನ "ಹಿಂದೂ" ಪತ್ರಿಕಾ ಸಂಪಾದಕರಾಗಿದ್ದ ದಿ। ರಂಗಸ್ವಾಮಯ್ಯಂಗಾರ್ಯರ ಸ್ಮಾರಕಕ್ಕಾಗಿ ಮದರಾಸಿನಲ್ಲಿ ಹಣ ಸಂಗ್ರಹವಾಗುತ್ತಿದೆ.

ಮುಂಬಾಯಿಯ ಡಿ॥ ಸೂ॥ ಇನ್ಸ್‌ಪೆಕ್ಟರ್ ಲೂವಿಸರವರು, ಹೆಂಡತಿಯೊಡನೆ ಜಗಳವಾಡಿ, ಆತ್ಮಹತ್ಯೆ ಮಾಡಿಕೊಂಡರು.

ರೈಬಹದ್ದೂರ್ ಸರ್ ಕೂರ್ಮ ವೆಂಕಟರೆಡ್ಡಿ ನಾಯ್ಡುರವರು ಮದರಾಸಿನ ಲೋ॥ ಮೆಂಬರರಾಗಿ ನೇಮಕ ಹೊಂದಿರುವರು.

ಸುಭಾಷ್ ಬೋಸರು ಪ್ರೇಗ್ ನಗರದ ಓರಿಯಂಟಲ್ ಕೊಲೇಜಿನ ಹಿಂದೀ ವಿಭಾಗದ ಪ್ರಾರಂಭೋತ್ಸವಕ್ಕಾಗಿ ಅತ್ತ ತೆರಳಿರುವರು.

ಹೆನ್ರಿ ಫೋರ್ಡರವರ ಸಹೋದರರವರು ದಿವಾಳಿಯಂತೆ! ಫೋರ್ಡರಿಂದ ಸಹಾಯವಿಲ್ಲ!!

ಕೊಯಮುತ್ತೂರಿನಲ್ಲಿ ಸಿಡುಬು ಪ್ರಬಲವಾಗಿದೆ.

ಮೈಸೂರು ನರ್ಸಣ್ಣನ ಓಪನ್ ಲೆಟರ್.

ಬೈ ಮಿಸ್ಟರ್—ಮೈಸೂರು ನರ್ಸಣ್ಣ.



ಮಂಗಳೂರು ನಗರ ಸಭೆಯವರ ಸಮಕ್ಷಮದಲ್ಲಿ ವಂದನೆಗಳು;

ಅದಾಗಿ, ಕಳೆದ ವರ್ಷದ ತಮ್ಮೆಲ್ಲರ ಸಲಹೆ-ಆಡಳಿತೆಗಳಿಂದಾಗಿ ನಷ್ಟ ಸಂಭವಿಸದೆ, ಸಭೆಯು ಲಾಭ ಪಡೆದಿರುವುದನ್ನು ಕೇಳಿ ಅತ್ಯಂತ ಸಂತೋಷಗೊಂಡಿದ್ದೇನೆ. ತಮಗೆ ಧನ್ಯವಾದಗಳು.

ಅದಂತಿರಲಿ;-ಸಿಡುಬು ರೋಗವು ಪ್ರಚಂಡವಾಗಿ ಹರಡಿರುವುದು ತಮಗೆ ವಿದಿತವಿದೆ. ವಾರವಾರ ಮರಣಗಳು ಹೆಚ್ಚುತ್ತಿವೆ—ಮಾರ್ಚಿಯ ಮಧ್ಯ ವಾರದಲ್ಲಿ 43 ಜನರಿಗೆ ಸಿಡುಬು ತಗಲಿತು. 3 ಜನರು ಮೃತರಾದರು. ಮಾರ್ಚಿ ಅಂತ್ಯದಲ್ಲಿ 40 ಜನರಿಗೆ ತಗಲಿ, 5 ಜನರು ತೀರಿಕೊಂಡರು . . . ! ಹೀಗೆಯೇ ಆಗುತ್ತಾ ಹೋದರೆ ಹೇಗೆ? ಇದನ್ನು ಕಂಡು ಸುಮ್ಮನಿರಬಹುದೇ? ಕೊಯಂಬುತ್ತೂರಿನಲ್ಲಿ ನಾಗರಿಕರ ಸಭೆಯಾಗಿ "ಮುನಿಸಿಪಾಲಿಟಿಯು, ಜನರಿಗೆ ಒತ್ತಾಯದಿಂದ ದಾಖು ಹಾಕಿಸಬೇಕು; ಪ್ರಚಾರ ನಡೆಸಬೇಕು; ಈ ಜಾಡ್ಯ ತಾಗಿದವರ ಆರೈಕೆಗಾಗಿ ಒಂದು ಪ್ರತ್ಯೇಕ ಚಿಕಿತ್ಸಾಲಯವನ್ನು ಕಟ್ಟಿಸಿ ವೈದ್ಯರನ್ನು ನೇಮಿಸಬೇಕು; ಎಂಬ್ಯೂಲೆನ್ಸ್ ಕಾರ್ ಇಡಿಸುವಂತಾಗಬೇಕು; ರಾತ್ರಿಯ ವಿನೋದ ಕೂಟಗಳನ್ನು ನಿಲ್ಲಿಸಬೇಕು; ರಾತ್ರಿ 9 ಘಂಟೆಯ ಒಳಗೆ ಕಾಫಿ ಹೊಟೇಲುಗಳನ್ನು ಮುಚ್ಚಿಸುವ ಏರ್ಪಾಡು ಮಾಡಬೇಕು; ಮೈಲಿಗೆಗೆ ಡೋಬಿಗಳು ಕಾರಣರಾದುದರಿಂದ ಅವರ ಮನೆಗಳ ಸ್ವಚ್ಛತೆಯ ಏರ್ಪಾಡಬೇಕು"—ಎಂದು ಮೊದಲಾಗಿ ನಿರ್ಧರಿಸಿ ಮುನಿಸಿಪಾಲಿಟಿಗೆ ತಿಳಿಸಿದರು. ಇನ್ನೂ ಕೆಲವೆಡೆಗಳಲ್ಲಿ ಹೀಗೆ ಮಾಡಿದ್ದಾರೆ; ತಾವು ಕೂಡಾ ಈ ವಿಷಯಗಳನ್ನು ಇನ್ನೂ ಹೆಚ್ಚಿನ ಲಕ್ಷ್ಯಕ್ಕೆ ತೆಗೆದುಕೊಂಡು ಬಡವರನ್ನು ಪಾಲಿಸಬೇಕು. ನೀರೇಶ್ವಾಲ್ಯವೆಂದರೆ ಸಿಡುಬಿನ ಜನನ ಸ್ಥಾನ; ತೇವವುಳ್ಳ-ಅಲ್ಲಲ್ಲಿ ನೀರು ನಿಂತು ಕಶ್ಮಲ ತುಂಬಿದ ವಠಾರ ಅದು. ಅಲ್ಲಿ, ಅನೇಕ ಕಡೆಗಳಲ್ಲಿ, ಸರಿಯಾದ ಪಾಯಿಖಾನೆಗಳಿಲ್ಲ. ನೀರೇಶ್ವಾಲ್ಯ ಎಲಿಮೆಂಟರಿ ಶಾಲೆಯ ಬಳಿ ವಠಾರವನ್ನು ಒಮ್ಮೆ ಪರೀಕ್ಷಿಸಿದರೆ ತಿಳಿಯುವುದು! ಜನರು, ಕಂಡ ಕಂಡೆಡೆ ಮಲವಿಸರ್ಜನೆ ಮಾಡುತ್ತಿರುವರು. ನೀರೇಶ್ವಾಲ್ಯ ವಾರ್ಡಿಗೆ ಪಬ್ಲಿಕ್ ಪಾಯಿಖಾನೆ ಅಗತ್ಯ. ಹೊಳೆಯ ಬದಿಯೆಂದು ತಿರಸ್ಕರಿಸಿ ಇಂತಹ ಗತಿಯಾಯಿತು! ದಯವಿಟ್ಟು ಗಮನಿಸುವಿರಾಗಿ ನಂಬುವ, **ಮೈ. ನ.**

ಮಂಗಳೂರು ತಾಲೂಕು, ಬೋಳೂರು ಗ್ರಾಮದ ಪಟೇಲ ರಾ। ರಾಮಚಂದ್ರಯ್ಯನವರ ಸಮಕ್ಷದಲ್ಲಿ ನಮಸ್ಕಾರ.

ಅದಾಗಿ, ಮೊನ್ನೆ ಉರ್ವದ ಟೋಲ್‌ಗೇಟಿನ ಬಳಿಯಲ್ಲಿ ಸಿಡುಬಿಗೆ ಬಲಿಯಾಗಿ, ಒಂದು ಶವವು 2 ದಿನಗಳ ತನಕ ಮನೆಯೊಳಗೆ ಬಿದ್ದುಕೊಂಡು ನೆರೆಕರೆಯವರನ್ನು ಹಾಹಾಕಾರಕ್ಕೆ ಗುರಿಪಡಿಸಿತ್ತಷ್ಟೆ!! ಗತಿಗೆಟ್ಟ ಶವಗಳನ್ನು ಪಟೇಲರು ಅಧಿಕಾರಿಗಳಿಗೆ ತಿಳಿಸಿ ಶವ ದಫನದ ವ್ಯವಸ್ಥೆ ಮಾಡಬೇಕೆಂದು ಶಾಸನವಿದೆ. ಇದು ತಮ್ಮ ಅವಗಾಹನೆಗೆ ಬರಲೇ ಇಲ್ಲವೇ? ಉರ್ವದಲ್ಲಿ ಮುನ್ಸಿಪಲ್ ವಾರಂಟ್ ಆಫೀಸರ್ಗದ ಶ್ರೀ ರಂಗಪ್ಪನವರ ಮನೆಯ ಬಳಿ ಸಿಡುಬು ರೋಗದಿಂದ ಮೃತವಾದ ಒಬ್ಬನನ್ನು ಮನೆಯಲ್ಲೇ ಬಿಟ್ಟು ಮನೆಯವರು ಓಡಿಹೋದರಂತೆ. ಕೇಳುವವರಿಲ್ಲದೆ-ಪಟೇಲರೂ ನೋಡ ಸಿಗದೆ-ಬಹಳ ಗಡಿಬಿಡಿಯಾಯಿತಂತೆ! ಇದಕ್ಕೆ ಕಾರಣ ರಾರೆಂದು ವಿಚಾರಿಸಲಾಗಿದೆಯೋ? ಇಂತಿ ತಮ್ಮ, **ಮೈ. ನ.**

ಮ. ರಾ. ರಂಗರಾವ್ ತಲಚೇರಿಕರ ಬಿ. ಎ. ಎಲ್‌ಎಲ್. ಬಿ. ಮಂಗಳೂರು. ಇವರ ಸನ್ನಿಧಿಗೆ—

ಅದಾಗಿ, ತಾವು ಹರಿಜನೋದ್ಧಾರ ದೃಷ್ಟಿಯಿಂದ ಬಹುವಾಗಿ ಕೆಲಸಮಾಡುತ್ತಿರುವಿರೆಂದು ಕೇಳಿ ಅತ್ಯಂತ ಆನಂದ ಭರಿತವಾಗಿದ್ದೇನೆ. ಸಿನೆಮ ನಾಟಕ ಕಂಪೆನಿಗಳಿಗೆ ಹರಿಜನರು ಪ್ರವೇಶಿಸುವ ವಿಷಯದಲ್ಲಿ ಅವರ ಬೆಂಬಲವಿರುವಿರಾಗಿ ಅನೇಕರು ಹೇಳಿರುವುದನ್ನು ಕೇಳಿ ಸಂತೋಷಗೊಂಡಿದ್ದೇನೆ. ಚಳವಳವು ಅಭಿನಂದನೀಯ! ಹರಿಜನರಿಗೆ ಸಿನೆಮ ಅಭ್ಯಾಸವನ್ನು ಮಾಡಿಸುವುದು ನಿಜವಾಗಿಯೂ—ಅವರ ಆರ್ಥಿಕ ದೃಷ್ಟಿಯಿಂದಲೂ—ಅವರ ನೈತಿಕ ದೃಷ್ಟಿಯಿಂದಲೂ ಯೋಗ್ಯವೇ ಸರಿ! ಮುಂದಕ್ಕೆ ತಮ್ಮ, ಇತರರ, ಮನೆಮಂದಿರಗಳಿಗೂ ಹರಿಜನರು ಪ್ರವೇಶಿಸುವಂತಾಗಲೆಂದು ಹಾರೈಸುತ್ತೇನೆ—ತಮ್ಮ ಪುಣ್ಯಕಾರ್ಯಕ್ಕೆ ಶ್ರೀ ದೇವರು ವಿಜಯವನ್ನು ತಂದೊಡ್ಡಲಿ!!! ಇಂತಿ, **ಮೈ. ನ.**

ಖಾದಿಯು ಬಡವರ ಭಾಗ್ಯ.

ಲೇಖಕರು:—ದೇಶಭಕ್ತ ಸಿ. ರಾಜಗೋಪಾಲಾಚಾರ್ಯರು.

ಗ್ರಾಮಾಂತರಗಳಲ್ಲಿ ಬಡತನವಿರುವ ತನಕ ಖಾದಿಯ ಕಥೆಯು ಎಷ್ಟು ಬೇಸರವನ್ನುಂಟುಮಾಡಿದರೂ ಅದನ್ನು ಪುನಃ ಪುನಃ ಹೇಳಲೇ ಬೇಕು. ಈ ಹತ್ತು ವರ್ಷಗಳ ಅವಧಿಯಲ್ಲಿ ಖಾದಿಯ ಹುಟ್ಟುವಳಿಯನ್ನು ನಾವು ಇಮ್ಮಡಿ ಮಾಡಿದ್ದೇವೆ. ಮತ್ತೂ ಅದರ ಮುಖಾಂತರವಾಗಿ ಹಳ್ಳಿಯ ಕುಟುಂಬಗಳ ಸೇವೆಯನ್ನಾದರೂ ಹೆಚ್ಚಾಗಿ ಮಾಡಿದ್ದೇವೆ. ತಮಿಳು ನಾಡಿನಲ್ಲಿ ಖಾದಿಯ ಹುಟ್ಟುವಳಿಯ ಪ್ರಮಾಣ ವನ್ನು ನೋಡೋಣ—

ೞ೯೨೩ ೧೯೩೩

ಚರಕ ಸಂಘದಿಂದ

೨೯,೦೧೪೪೮, ೫೩೩೮೦೬

ಇತರ ವರ್ತಕರಿಂದ ೧೮೨ ೨೧೬,೫೨೦೮೭೧

ಒಟ್ಟು ೪೭೨೩೬೪ ೧೦೫೪೬೭೭

ಖಾದೀ ಹುಟ್ಟುವಳಿಯು ಪ್ರಮಾಣವು ಇದೇ ರೀತಿ ಯಾಗಿ ಎಲ್ಲಾ ಪ್ರಾಂತಗಳಲ್ಲಿಯೂ ಕಂಡು ಬರುತ್ತದೆ. ಬೆಳವಣಿಗೆಯು ಸಮಾಧಾನಕಾರಕವಿದ್ದರೂ, ಹುಟ್ಟುವ ಳಿಯು ಇಷ್ಟು ಸಾಕಾಗದು. ಎರಡು ಲಕ್ಷ ರಾಟೆಗಳೂ ಹನ್ನೆರಡು ಸಾವಿರ ಮಗ್ಗಗಳೂ ನಡೆದಿರಬಹುದೆಂದು ಹೇಳ ಬಹುದು. ಖಾದೀ ಹುಟ್ಟುವಳಿಯ ಲಾಭವನ್ನು ಪಡೆ ಯುವ ಹಳ್ಳಿಗಳ ಸಂಖ್ಯೆಯು ದಿನ ದಿನಕ್ಕೆ ಬೆಳೆಯುವ ಸಲುವಾಗಿ ಪ್ರತಿಯೊಬ್ಬ ದೇಶಾಭಿಮಾನಿಯಾದ ಹಿಂದೀ ಯನು ಉಳಿದ ಬಟ್ಟೆಯನ್ನು ಬಿಟ್ಟು ಖಾದೀ ಬಟ್ಟೆಯನ್ನು ಕೊಂಡುಕೊಳ್ಳಬೇಕು.

ಹಳ್ಳಿ ಪಟ್ಟಣಗಳ ನಡುವೆ ಸಂಬಂಧವನ್ನೂ ಬಳಕೆ ಯನ್ನೂ ಬೆಳೆಸುವ ಈ ರಾಟೆಯ ಕಾರ್ಯಕ್ರಮವು ಕೆಲವು ವರುಷಗಳ ನಂತರ ಬಿಟ್ಟುಬಿಡುವ ಕಾರ್ಯಕ್ರಮವು ಇದಲ್ಲ. ಮನುಷ್ಯನ ದೇಹದಲ್ಲಿ ರಕ್ತವು ಬಿಡದೆ ಹರಿದಾಡು ವಂತೆ, ಈ ರಾಟೆಯ ಕಾರ್ಯಕ್ರಮವು ಎಡೆಬಿಡದೆ ನಡೆ ಯಲೇ ಬೇಕು. ಹಳ್ಳಿ-ಪಟ್ಟಣಗಳನ್ನು ಗಟ್ಟಿಯಾಗಿ ಹೊಂದಿ ಸುವಂತಹದು ಇದೊಂದು ಕಾರ್ಯಕ್ರಮವು. ಕಳೆದ ಹತ್ತು ವರ್ಷಗಳಿಂದ ಖಾದಿಯನ್ನು ಕೊಂಡು ನೀವು ಧರಿಸಿರ ಬಹುದು; ಅಷ್ಟರಿಂದ ಕಾರ್ಯವಾಗಲಾರದು; ಬಟ್ಟೆಯ ಸಲುವಾಗಿ ನೀವು ವ್ಯಯ ಮಾಡುವ ಪ್ರತಿಯೊಂದು ಕಾಸು ದೇಶದಲ್ಲಿರುವ ಬಡವರಿಗೆ ಮುಟ್ಟುವಂತೆ ನೋಡಿಕೊಳ್ಳು ವುದು ನಮ್ಮ ಕರ್ತವ್ಯ. ಸೋಗಿನವನು ತನ್ನ ಉಡುಪನ್ನು ಆರಿಸುತ್ತಾನೆ. ಅದು ಅಗ್ಗದರದಿಂದ ಸಿಕ್ಕಲು ಅವನು ಹಿಗ್ಗುತ್ತಾನೆ. ಬಟ್ಟೆಯ ಸಲುವಾಗಿ ವೆಚ್ಚ ಮಾಡುವ ತನ್ನ ಹಣವು ಎಲ್ಲಿ ಹೋಗುತ್ತದೆಂಬುದರ ಬಗ್ಗೆ ದೇಶಾಭಿಮಾ ನಿಯು ಉದಾಸೀನನಿರುವುದಿಲ್ಲ. ಆ ಹಣವು ರಾಷ್ಟ್ರ ಪೋಷಣೆಗಾಗಿ ಉಪಯೋಗಿಸಲ್ಪಡಬೇಕೆಂದು ಅವನು ಬಯಸುತ್ತಾನೆ. ದರಿದ್ರರ ಮತ್ತು ಧನಿಕರ ಜಮಾ ಖರ್ಚನ್ನು ಈ ಖಾದಿಯು ಏಕಜೀವ ಮಾಡುತ್ತದೆ.

ಗಾಂಧಿಜೀಯವರ ಪ್ರಯತ್ನದಿಂದ ಹಳ್ಳಿಯ ಕುಟುಂಬ ಗಳ ಆದಾಯವು ಕಿಂಚಿತ್ ಹೆಚ್ಚಿತು. ಆದುದರಿಂದ, ಹಳ್ಳಿ ಗರು ಈ ಹತ್ತು ವರುಷಗಳ ವರೆಗೆ ರಾಟೆಯನ್ನಾಶ್ರಯಿಸಿ ದ್ದಾರೆ. ಕೃಷಿಜನ್ಯ ಸರಕುಗಳ ಬೆಲೆಯು ಇಳಿದದ್ದರಿಂದ ರಾಟೆಗಳಿಂದ ಬರುವ ಹಣದ ಮಹತ್ವವು ಈಗ ಮತ್ತಷ್ಟು ಹೆಚ್ಚಾಗಿದೆ. ಯಾವುದೋ ಕಾರಣದಿಂದ ಒಕ್ಕಲಿಗರ ಕುಟುಂಬಗಳು ಸಾಲದಲ್ಲಿ ಮುಳುಗಿ ಕಷ್ಟಗಳಿಗೀಡಾಗಿರು ತ್ತವೆ. ಈ ಕುಟುಂಬಗಳ ವಾರ್ಷಿಕ ಆದಾಯದಲ್ಲಿ ಸಾಲ ತೀರಿಸುವುದಕ್ಕೆ ಹಣವು ಉಳಿಯುವುದಿಲ್ಲ. ಒಮ್ಮೊಮ್ಮೆ ಅವುಗಳ ಜಮಾ ಖರ್ಚು ಬಾಯಿಗೂಡುವುದಿಲ್ಲ. ಆಯ ವ್ಯಯದಲ್ಲಿಯ ಕೊರತೆಯು ಲೆಕ್ಕಪತ್ರದಲ್ಲಿ ಕಾಣಿಸುವು ದಿಲ್ಲ. ಬಡಜನರ ಶಾರೀರಕ ದೌರ್ಬಲ್ಯ, ಆಪಾರ ದುರ್ದೆಶೆ ಮೊದಲಾದುವುಗಳಲ್ಲಿ ಅದು ಕಂಡು ಬರುತ್ತದೆ.

ಗಿರಣಿಗಳಲ್ಲಿ ಬಟ್ಟೆಯನ್ನು ವಿಪುಲವಾಗಿ ಹುಟ್ಟಿಸ ಬಹುದು. ಎಲ್ಲಿಯ ವರೆಗೆ ಯಂತ್ರಗಳು ಕೆಲವು ಬಂಡ ವಾಳಗಾರರ ವಶದಲ್ಲಿರುವುವೋ, ಅಲ್ಲಿಯ ವರೆಗೆ ನಿರು ದ್ಯೋಗವು ಬೆಳೆಯುವುದು. ಉದ್ಯೋಗವಿಲ್ಲದುದರಿಂದ ಜನರಾದರೂ ಉಪವಾಸ ಬೀಳಬೇಕಾಗುವುದು. ಹಳ್ಳಿ

23ನೇ ಪುಟವನ್ನು ನೋಡುವುದು.

ಮದ್ರಾಸು ಕೌನ್ಸಿಲೂ ದೇಶದ ಬಡ ಜನರೂ.

ಮದ್ರಾಸು ಕೌನ್ಸಿಲಿನ ಅವಧಿಯನ್ನು ಇನ್ನೊಂದು ವರ್ಷದ ವರೆಗೆ ಗವರ್ನರ್ ಸಾಹೇಬರು ಮುಂದುವರಿಸಿದ ರೆಂಬ ವಾರ್ತೆಯು ಮೊನ್ನೆ ಪ್ರಕಟವಾಯಿತು. ಸ್ವಾಭಾವಿಕವಾಗಿ, ನವಂಬರ ತಿಂಗಳಲ್ಲಿ ಬರಖಾಸ್ತು ಹೊಂದ ಬೇಕಾಗಿದ್ದುದಕ್ಕೆ ಒಂದು ವರ್ಷದ ಆಯುರ್ದಾನ ಮಾಡಿದವರ "ಔದಾರ್ಯವನ್ನು" ದೇಶದ ಯಥಾರ್ಥ ಕ್ಷೇಮ ಚಿಂತಕರು ಹೊಗಳುವಂತಿಲ್ಲ. ಮಂತ್ರಿಪದವಿಯ ಅಧಿಕಾರ ಲಾಲಸರಿಗೆ ಮಾತ್ರ ಇದರಿಂದ ಸಂತೋಷವಾಗುವುದು; ಗವರ್ನರರ ಸಂದೇಶವನ್ನು ಕೇಳಿದೊಡನೆ ಅವರಿಗೆ ಸಹಿಸಲಾರದ ಆನಂದವಾಯಿತೆಂದು ತಿಳಿಯುತ್ತದೆ. ವಿಶೇಷವಾದ ರಾಜಕೀಯ ತತ್ವಗಳಲ್ಲದೆ, ಸಂದರ್ಭ ಬಂದಾಗ ಅಧಿಕಾರದ ಸವಿ ತಿನಿಸುಗಳಿಗೆ ಕೈನೀಡಿ, ಇಂದಿನ ದಿನ ನಮ್ಮದು; ನಾಳೆ ಯಾರದೋ? ಎನ್ನುವಂತೆ ಕಾಲಹರಣ ಮಾಡಬೇಕಾದವರು ಇಂತಹ ನಿರ್ಣಯಗಳನ್ನು ಸ್ವಾಗತೀಕರಿಸದೆ ಮಾಡುವುದಾದರೂ ಏನು?

ಅವಧಿಯನ್ನು ಮುಂದುವರಿಸುವ ಬಗ್ಗೆ ಗವರ್ನರ್ ಸಾಹೇಬರು ಕೊಟ್ಟ ಕಾರಣವು-ಬಡಜನರಿಗೆ ಅನವಶ್ಯವಾದ ಕಷ್ಟ ನಷ್ಟಗಳನ್ನು ಕೊಡಬಾರದು; ಎಂಬುದು. ಜನರು ಬಡವರೂ ಹೌದು; ಅವರಿಗೆ ಅನವಶ್ಯ ಕಷ್ಟಗಳನ್ನು ಕೊಡಬಾರದೆಂಬುದೂ ಸರಿಯೆ. ಆದರೆ, ಯಾವ ಪ್ರಜಾ ಪ್ರತಿನಿಧಿ ಸಂಸ್ಥೆಯು ಪ್ರಜಾ ಪ್ರಭುತ್ವದ ಅಸ್ತಿವಾರದ ಮೇಲೆ ರಚಿಸಲ್ಪಟ್ಟಿದೆ ಎಂದು ಸರಕಾರದವರು ಹೇಳುವರೋ, ಅಂತಹ ಸಂಸ್ಥೆಗಳಿಗೆ ಕೃತ್ರಿಮೋಪಾಯಗಳಿಂದ ಜೀವ ಕೊಟ್ಟು ಬದುಕಿಸುವುದು ಪ್ರಜಾ ಪ್ರಭುತ್ವದ ಮೂಲ ತತ್ವಗಳಿಗೇ ವಿರೋಧ. ಅವು ಸಮಯ ಮೀರಿ ಬದುಕಿದ್ದರೂ, ಇಲ್ಲದಂತೆಯೇ ಸರಿ. ಜಾಯಿಂಟ್ ಸಿಲೆಕ್ಟ್ ಕಮಿಟಿಯು ಹಿಂದೂ ದೇಶದ ರಾಜಸೂತ್ರಗಳ ಕುರಿತು ಯಾವ ನಿರ್ಣಯಗಳನ್ನು ಮಾಡುವುದೆಂದು ಗೊತ್ತಿಲ್ಲ. ಹೊಸ ಸೂತ್ರಗಳು ಬರುವಾಗ ವರ್ಷ ಒಂದಾಗ ಬಹುದು; ಎರಡಾಗ ಬಹುದು; ಯಾರು ಬಲ್ಲರು? ಅದು ವರೆಗೆ, ಪ್ರಾಯ ಮೀರಿದ ಮುಪ್ಪಿನಲ್ಲಿರುವ ಕೌನ್ಸಿಲು, ಗವರ್ನರರು ಕೊಟ್ಟ ವರಬಲದಿಂದ ಊರುಗೋಲು ಹಿಡಿದು ಕಾಲಕ್ಷೇಪ ಮಾಡಬೇಕೆಂದರೆ ಶೋಚನೀಯವಷ್ಟೆ. ಚುನಾವಣೆಗಳಿಗೆ "ಅನವಶ್ಯ"ವಾದ ವೆಚ್ಚಗಳು ಇವೆ; ಎಂಬುದೇನೋ ನಿಜ. ಹೊಸ ಸುಧಾರಣೆಗಳು ಬಂದಂದಿನಿಂದ ಚುನಾವಣೆಗಳಿಗಾಗಿ ನಮ್ಮ ದೇಶದ ಲಕ್ಷಾಂತರ ರೂಪಾಯಿಗಳು ಧೂಳೀಪಟವಾಗಿವೆ. ಆದರೆ ಇದು ಪ್ರಜಾ ಪ್ರಭುತ್ವದ ಆಡಳಿತೆಯೆಂದು ಹೇಳಿಸಿಕೊಳ್ಳುವ ಕಾರಭಾರದಲ್ಲಿ ಅನವಶ್ಯವೆನ್ನಲು ಆಗುವುದಿಲ್ಲ. ಬಡ ರೈತರ ಪುಡಿಕಾಸು ವೃಥಾ ಹಾಳಾಗುತ್ತದೆ ಚುನಾವಣೆಗಳಿಂದ! ಇದರಲ್ಲಿ ಸಂದೇಹವಾದರೂ ವಾದರೂ ಏನು? ಸರಕಾರದವರು ಬಡ ರೈತರ ಬಗ್ಗೆ ಎಷ್ಟು ಅನುಕಂಪವುಳ್ಳವರಾಗಿದ್ದಾರೆ?--ಎಂಬುದು ಅವರ ಕಂದಾಯದ ಧೋರಣದಿಂದ ತಿಳಿದು ಬಂದೀತು. ಚುನಾವಣೆಯು ಕಷ್ಟ ನಷ್ಟಗಳನ್ನು ಹೊರಲಾರದ ಬಡ ರೈತರ ಕಂದಾಯದ ಹೊರೆಯನ್ನು ಕಡಿಮೆ ಮಾಡಬೇಕೆಂದು ಜನರು ಪ್ರಾರ್ಥಿಸಿಕೊಂಡರೆ, ಸರಕಾರವು ಕೊಡುವ ರಿಯಾಯತಿಯು ಚಿಲ್ಲರೆಯದು. ಇಂತಹ ಅಲ್ಪ ರಿಯಾಯತಿಯಿಂದ ರೈತರ ಉದ್ಧಾರವಾಗುವುದಿಲ್ಲವಂತೆ. ಹೀಗೆನ್ನುವವರೇ, ಫಕ್ಕನೇ ಅದೇ ರೈತರ ಹಿತಚಿಂತಕರಾಗಿ ರೂಪ ಪಲ್ಲಟನ ಹೊಂದುವುದನ್ನು ನೋಡುವಾಗ ನಗುಬಾರದೆ? ಕಾಲಕ್ಕೆ ಸರಿಯಾದ ಸವಿಮಾತುಗಳನ್ನು ಆಡುವುದು ಅಧಿಕಾರದ ಚಲಾವಣೆಯ ಮೂಲಸೂತ್ರವಾಗಿರುವಾಗ ಇಂತಹ ಮಾತುಗಳಿಗೆ ಯಾರೇನೂ ಬೆಲೆ ಕೊಡುವಂತಿಲ್ಲ.

ಮಂತ್ರಿಮಂಡಲದ ಪಕ್ಷದವರಿಗೆ ಈ ನಿರ್ಣಯವು ಮಾನ್ಯವಾದುದರಲ್ಲಿಯೂ ವ್ಯಸನಕರವಾದ ಒಂದು ಪ್ರಪಂಚವಿದೆ. ನಮ್ಮ ಮಂತ್ರಿಮಂಡಲದವರೂ ಬಡ ರೈತರ ಹಿತಚಿಂತಕರಂತೆ. ಈ ಹಿತಬುದ್ಧಿಯಿಂದಲೇ, ಅವರು ಹಿಂದಿನ ಮಂತ್ರಿಗಳಿಗಿಂತ ಹೆಚ್ಚು ಊರಲ್ಲಿ ಸುತ್ತಾಡಿ, ಬಡ ರೈತರ ದುಡ್ಡನ್ನು ಹಿಂದಿನವರಿಗಿಂತ ಹೆಚ್ಚಾಗಿ ಹಾಳು ಮಾಡಿದ್ದಾರೆ. ಇನ್ನೊಂದು ವರ್ಷವೂ ಇದೇ ರೀತಿಯ ನಿಸ್ವಾರ್ಥ ಕಾರ್ಯವನ್ನು ಮಾಡುವ ಸಂದರ್ಭ ದೊರೆಯಿತೆಂದೇ ಈ ಮಂತ್ರಿಮಂಡಲದವರು ಹಿರಿ ಹಿಗ್ಗುವುದೇ? ಅಂತೂ ನಮ್ಮ ಸರಕಾರದವರೂ, ಅವರ ಶ್ವೇತಚ್ಛತ್ರದ ನೆರಳಲ್ಲಿ ಸುಖವಾಗಿ ವಾಸಿಸುವ ಮಂತ್ರಿಪಕ್ಷದವರೂ, ದೇಶದ ಬಡ ರೈತರೆಂದರೆ ಮೂಕಪ್ರಾಣಿಗಳೆಂದು ಭಾವಿಸಿದ ಹಾಗೆ ತೋರುತ್ತದೆ. ಅವರಿಗೆ ಯಾವುದರ ಕುರಿತು ಅಭಿಪ್ರಾಯ ಹೇಳುವುದಕ್ಕೂ

ಶಕ್ತಿ ಸಾಮರ್ಥ್ಯಗಳಿಲ್ಲ;—ಎಂದು ನೆನೆದ ಹಾಗೆ ತೋರುತ್ತದೆ. ಶ್ವೇತಪತ್ರವೊಂದು ದೇಶದ ಮುಂದಿದೆ. ಇದರ ಯೋಗ್ಯತಾ ಯೋಗ್ಯತೆಗಳನ್ನು ಜನರು ಹೇಗೆ ಗ್ರಹಿಸಿರುವರು? ಮಂತ್ರಿಮಂಡಲದವರು ತಮ್ಮ ಮುಷ್ಟಿಯೊಳಗೆ ಬಂದು ಅಧಿಕಾರಗಳನ್ನು ಹೇಗೆ ಪ್ರಯೋಗಿಸಿರುವರು? ಜನರು ಇದಕ್ಕೇನೆನ್ನುವರು? ಎಂದು ತಿಳಿವುದಕ್ಕೆ ಸದ್ಯಕ್ಕೆ ಉಪಾಯವಿಲ್ಲವೆಂದಾಯಿತು. ಬಡ ರೈತರು ಕಷ್ಟಪಟ್ಟಾದರೂ ನಷ್ಟಪಟ್ಟಾದರೂ ತಮ್ಮ ಸಮ್ಮತಿ—ಅಸಮ್ಮತಿಗಳನ್ನು ತೋರಿಸುವುದಕ್ಕೆ ಸಿದ್ಧರಾಗಿರುತ್ತಿದ್ದರು. ಅವರ ಪ್ರತಿನಿಧಿಗಳಾಗಿ ಕೌನ್ಸಿಲಿಗೆ ಹೊಕ್ಕ ಸದಸ್ಯರು, ಮಂತ್ರಿಪಕ್ಷದವರನ್ನು ಬಿಟ್ಟು ಉಳಿದವರು ಇದೇ ಅಭಿಪ್ರಾಯವನ್ನು ಹತ್ತಾರು ಸಲ ಕೌನ್ಸಿಲಿನಲ್ಲಿ ಹೇಳಿ ಕಂಠಶೋಷಣೆ ಮಾಡಿ ಆಯಿತು. ಆದರೂ ಸರಕಾರದ ತಲೆಗೆ ಆಕಸ್ಮಿಕವಾಗಿ ಅಡರಿದ ಬಡ ರೈತರ ಹಿತಬುದ್ಧಿಯು ಅದಕ್ಕೆ ವಿಘ್ನ ತಂದೊಡ್ಡಿತು. ಬಡ ರೈತರು ಧನ್ಯರಲ್ಲವೇ?

'ರಾಷ್ಟ್ರಬಂಧು

ದಿ ಸೌತ್ ಕೆನರಾ ಫಿಸಿಕಲ್ ಕಲ್ಚರ್ ಇನ್ಸಿಟ್ಯೂಟ್, ಮುಂಬಾಯಿ, ಈ ವ್ಯಾಯಾಮ ಮಂಡಲದ ಚಾಲಕರಾದ ಪ್ರಖ್ಯಾತ ಪ್ರೊಫೆಸರ್ ಎನ್. ಶೇಷಪ್ಪನವರ ಜ್ಯೇಷ್ಠ ಪುತ್ರಿ ಸುಮತಿ ದೇವಿ ಎಂಬ ಕನ್ನಿಕೆಯು ಎರಡು ಮೂರು ದಿನಗಳ ಜ್ವರದ ಕ್ಯಾಲೆಯಿಂದ ವಿಪರೀತ ವಾಂತಿಯಾಗಿ—ಕರುಳಲ್ಲಿ ದೋಷವಿದೆಯೆಂಬ ಡಾಕ್ಟರರ ಅಭಿಪ್ರಾಯದ ಮೇರೆಗೆ—ಗೋಕುಲದಾಸ ತೇಜಪಾಲ ಆಸ್ಪತ್ರೆಯಲ್ಲಿ ತಾ. 25–3–'34ನೇ ಆದಿತ್ಯವಾರ ಶಸ್ತ್ರ ಚಿಕಿತ್ಸೆಯಾದ ಎರಡು ಘಂಟೆಯ ಸಮಯದೊಳಗಾಗಿ, ಆಕಸ್ಮಾತ್ ಸ್ವರ್ಗಸ್ಥಳಾದ ಚಿಂತಾಪೂರ್ಣ ವಾರ್ತೆಯನ್ನು ತಿಳಿಸಲು ತುಂಬಾ ದುಃಖವಾಗುತ್ತಲಿದೆ.

ದುರ್ದೈವವಶಾತ್ ಸಂಭವಿಸಿದ ಈ ಘಟನೆಯ ಸಲುವಾಗಿ ದುಃಖಿಸುತ್ತಿರುವ ಮೃತಳ ತಂದೆ, ತಾಯಿ, ಅಣ್ಣ, ತಮ್ಮಂದಿರ ಮಹಾ ಚಿಂತೆಯಲ್ಲಿ ನಾವೂ ಭಾಗಿಗಳಾಗಿ ಅವಳ ಆತ್ಮಕ್ಕೆ ದೇವರು ಚಿರಶಾಂತಿಯನ್ನೀಯಲೆಂದು ಮನಸಾ ಪ್ರಾರ್ಥಿಸುತ್ತೇವೆ.

21ನೇ ಪುಟದಿಂದ ಮುಂದುವರಿದುದು.

ಗಳನ್ನು ಬಿಟ್ಟು ಹೋಗಲಾರದ ಕುಟುಂಬಗಳು ಅನೇಕ ತರದ ಕಷ್ಟ ನಷ್ಟಗಳಿಗೀಡಾಗಬೇಕಾಗುತ್ತದೆ. ಬಂಡವಲಗಾರರ ಯಂತ್ರಗಳು ಜನರ ಶ್ರಮವನ್ನು ಕಡಿಮೆ ಮಾಡಬಹುದು. ಅದರೆ ಹಳ್ಳಿಗರ ಗತಿಯೇನು? ಈ ಯಂತ್ರಗಳ ಮೂಲಕ ರಾಟೆಗಳೂ, ಕೈಮಗ್ಗಗಳೂ ನಾಶವಾಗ ಹತ್ತಿವೆ. ರಾಷ್ಟ್ರದ ಸಂಪತ್ತು ಎಲ್ಲರಲ್ಲಿಯೂ ಸಮಾನವಾಗಿ ಹರಿದು ಹಂಚಲ್ಪಡದೆ ಕೆಲವು ಬಂಡವಲಗಾರರಲ್ಲಿ ಮಾತ್ರ ಕೇಂದ್ರೀಕರಿಸಲ್ಪಟ್ಟರೆ ಅದು ನಿಜವಾದ ರಾಷ್ಟ್ರೀಯ ಸಂಪತ್ತಲ್ಲೆಂದು ಹೇಳಬಹುದು. ಕಾಲ ಮತ್ತು ಶ್ರಮವು ಯಂತ್ರಗಳ ಸಹಾಯದಿಂದ ಉಳಿಯುತ್ತವೆ. ಆದರೆ ಅವುಗಳ ಉಪಯೋಗವೇನು?

ಮಾನವೀಯ ಕಿಡುದೆಸೆಯ ಸಮಸ್ಯೆಯನ್ನು ನೀವು ಕಣ್ಣು ಮುಚ್ಚಿಕೊಂಡು ಬಿಡಿಸಲಾರಿರಿ. ಪೂರ್ಣ ಹೊಟ್ಟೆ ಗಿಲ್ಲದೆ ಬಳಲುವ ಬಡಜನರನ್ನು ಉಳಿಸಬೇಕಾದರೆ ಅವರ ಹೊಟ್ಟೆಗೆ ಹಾಕಲಿಕ್ಕೆ ಬೇಕು.

ಖಾದಿಯು ಅಗ್ಗ ದರದಿಂದ ಸಿಗುವುದಿಲ್ಲೆಂಬ ಕೂಗು ಅಲ್ಲಲ್ಲಿ ಕೇಳಬರುತ್ತದೆ. ನಮ್ಮ ಬಾಳುವೆಯನ್ನು ನಾವು ಯಾವಾಗಲೂ ಅಗ್ಗ ದರದಿಂದಲೇ ಸಾಗಿಸುತ್ತೇವೆಯೋ? ಯಾವುದೊಂದು ಭಾವನೆಯಿಂದ ಪ್ರೇರಿತರಾಗಿ ನಾವು ಬಹಳ ಹಣವನ್ನು ವೆಚ್ಚ ಮಾಡುತ್ತೇವೆ. ಆಚಾರ ಪರಂಪರೆಗಳಿಗೆ ಬಲಿಬಿದ್ದು ನಾವು ಎಷ್ಟೋ ಸಾರಿ ಶಕ್ತಿ ಮೀರಿ ಹಣವನ್ನು ವೆಚ್ಚ ಮಾಡುತ್ತೇವೆ. ಧಾರ್ಮಿಕ ಆಚಾರಗಳನ್ನು ಪರಂಪರೆಗಳನ್ನು ಧ್ಯಾನದಲ್ಲಿಡುವಂತೆ—ಬಡ ಜನರ ರಾಟೆಯನ್ನು ನೀವು ನೆನಪಿನಲ್ಲಿಡಬೇಕು. ವಿವಾಹ ಮೊದಲಾದ ಧಾರ್ಮಿಕ ಸಮಾರಂಭಗಳಲ್ಲಿಯೂ ಮೋಟಾರ ಗಾಡಿ ಮೊದಲಾದ ವಸ್ತುಗಳ ಸಲುವಾಗಿಯೂ ಬೇಕಾದಷ್ಟು ಹಣವನ್ನು ವೆಚ್ಚ ಮಾಡುವರು. ಖಾದಿಯ ಸಲುವಾಗಿ ನಾಲ್ಕು ಕಾಸು ಹೆಚ್ಚಿಗೆ ಕೊಡಲು ಯಾಕೆ ಹಿಂದೆ ಮುಂದೆ ನೋಡಬೇಕು?

ಖಾದಿಯ ವ್ಯಾಪಾರವು ಇತರ ವ್ಯಾಪಾರದಂತೆ ಲಾಭದಾಯಕವಲ್ಲ. ಆದುದರಿಂದ ವ್ಯಾಪಾರಸ್ಥರು ಯಾವಾಗಲೂ ಗಿರಣಿಯ ನೂಲಿನಿಂದ ಖಾದಿಯನ್ನು ನೇಯ್ದು ಅದನ್ನು ಶುದ್ಧ ಖಾದಿಯೆಂದು ಮಾರುತ್ತಾರೆ. ಖಾದೀ ಭಕ್ತರು ಈ ವಿಷಯವನ್ನು ಚೆನ್ನಾಗಿ ಲಕ್ಷ್ಯದಲ್ಲಿಡಬೇಕು. ಅಖಿಳ ಭಾರತ ಚರಕ ಸಂಘದಿಂದ ಅಪ್ಪಣೆಯನ್ನು ಪಡೆದ ಅಂಗಡಿಗಳಲ್ಲಿಯೇ ಒಳ್ಳೆಯ ಖಾದಿಯನ್ನು ಕೊಳ್ಳತಕ್ಕದ್ದು.

ಭೂಕಂಪದಿಂದಾದ ವೈಚಿತ್ರ್ಯಗಳು.

ಬಿಹಾರಿನಲ್ಲಾದ ಭೂಕಂಪವು ಸಾವಿರಾರು ಜನರನ್ನು ಕೊಂದು, ಲಕ್ಷಾಂತರ ಜನರನ್ನು ದಾರಿದ್ರ್ಯ ದುಃಖಕ್ಕೀಡು ಮಾಡಿತು. ಅಂತೆಯೇ ಕೆಲವು ಕ್ಷೇಮಕರ ವೈಚಿತ್ರ್ಯಗಳನ್ನೂ ತಂದೊಡ್ಡಿದೆ!

ಬಿಹಾರ್ ಪ್ರಾಂತ್ಯದ ಸೆಲೊಂಗ ಎಂಬಲ್ಲಿಂದ ತರಾಷ್ ಎಂಬಲ್ಲಿಗೊಬ್ಬ ಮಹಮ್ಮದೀಯನು ಪ್ರಯಾಣ ಮಾಡುತ್ತಿದ್ದನು. ನಡು ದಾರಿಯಲ್ಲಿ ಆತನಿಗೆ ಫಕ್ಕನೆ ಹೊಟ್ಟೆ ನೋವು ಕಾಣಿಸಿಕೊಂಡಿತು. ನಿಮಿಷ ನಿಮಿಷಕ್ಕೂ ವೇದನೆಯು ಅಸಹನೀಯವಾಯಿತು. ಅಲ್ಲೇ ಒಂದು ಮರದ ಕೆಳಗೆ ಬಿದ್ದುಕೊಂಡನು. ಸುತ್ತುಮುತ್ತಲೂ ನಿರ್ಜನ ಪ್ರದೇಶ!

ನರಳಿದನು; ಹೊರಳಿದನು. ವೇದನೆಯು ನಿಲ್ಲಲಿಲ್ಲ. ಮಲಗಿದ್ದಲ್ಲಿಂದಲೆ ಮೇಲಕ್ಕೆ ನೋಡುವಾಗ, ಮರದಿಂದೊಂದು ಬಗೆಯ ರಸವು ಹನಿಯುತ್ತಿದೆ. ವೇದನೆಯನ್ನು ಸಹಿಸಲಾರದಂತಹ ಸ್ಥಿತಿಯಲ್ಲಿ, ಆಸೆ ಕಂಡು, ಆ ರಸವನ್ನು ಕೈಯಲ್ಲಿ ಹಿಡಿದ! ಆತುರದಿಂದ ಪಾನಮಾಡಿಬಿಟ್ಟನು. ಆಶ್ಚರ್ಯ! ಕೆಲವೇ ನಿಮಿಷಗಳಲ್ಲಿ ವೇದನೆಯು ಸಂಪೂರ್ಣ ನಿಂತಿತು!! ಆನಂದಾಶ್ಚರ್ಯಗಳಿಂದ ಆ ಮಹಮ್ಮದೀಯನು ತನ್ನ ಊರನ್ನು ಸೇರಿ, ಈ ಅದ್ಭುತರಸದ ಮಹಿಮೆಯನ್ನು ಪ್ರಕಟಿಸಿದನು. ದೀರ್ಘಕಾಲದ ನಾನಾ ಬಗೆಯ ಬೇನೆಗಳಿಂದ ನರಳುವವರೆಲ್ಲರೂ ಈಗ ಆ ಮರವನ್ನು ನಂಬಿ ಅತ್ತ ಓಡುವುದಾಯಿತು. ಭೂಕಂಪ ಕಷ್ಟದಲ್ಲಿ ದೇವರು ಕೊಟ್ಟ ವರದಾನಸುಖವಿದೆಂದು ಜನರು ಆಡಿಕೊಳ್ಳುವರು.

ಕಲ್ಕತ್ತೆಯ 'ಅಮೃತ ಬಜಾರ' ಪತ್ರಿಕೆಯ ಬಾತ್ಮಿದಾರನು ಇದನ್ನು ಕಣ್ಣಾರೆ ಕಂಡು ಆಶ್ಚರ್ಯಗೊಂಡು ಆ ಸುದ್ದಿಯನ್ನು ತನ್ನ ಪತ್ರಿಕೆಗೆ ಬರೆದಿರುತ್ತಾನೆ. ಈ ಮರಕ್ಕೆ ಅಲ್ಲಿ 'ಲೈಕುರ್' ಎಂದು ಕರೆಯುತ್ತಿದ್ದಾರೆ. ತರಾಷ್ ಬಳಿ, ಜುರ್‌ಜುರಿ ಎಂಬ ಹಳ್ಳಿಯ ರಸ್ತೆಯಲ್ಲಿ ಈ ಮರವಿದೆ. ಮುರಿದ ಗೆಲ್ಲುಗಳಿಂದ ಈ ಅದ್ಭುತರಸವು, ಬೆಳಿಗ್ಗೆ ಘಂಟೆ ೭ರಿಂದ ಮಧ್ಯಾಹ್ನದ ತನಕ ತೊಟ್ಟಿಕ್ಕುತ್ತಾ ಇದೆ!

ಮತ್ತೊಂದದ್ಭುತ! ಭೀಕರ ವನ್ಯಜಂತುಗಳು ಕುರಿಮರಿಗಳಂತೆ ಸಾಧುಸ್ವಭಾವವನ್ನು ತಾಳಿರುವುವು—ಆಕಸ್ಮಿತವಾಗಿ ಭೂಕಂಪದಿಂದ ಭಯಗೊಂಡು, ಕಂಗಾಲಾಗಿ ಈ ಗುಣವು ಅವುಗಳಿಗೆ ಬಂದಿರಲೂ ಬಹುದು. ಆದರೆ, ಅವು ತಮ್ಮ ಕ್ರೂರಸ್ವಭಾವವನ್ನು ಬಿಟ್ಟಿರುವುದೊಂದು ಖಂಡಿತ.

ಭೂಕಂಪವು ನಗರಗಳನ್ನು ಮಾತ್ರವಲ್ಲ,—ಘೋರ ಅಡವಿಗಳನ್ನೂ ಬಿಡಲಿಲ್ಲ. ಅಡವಿಗಳು ಚೂರಾಗಿವೆ-ಮರಗಳುರುಳಿವೆ, ಭೂಭಾಗವಾಗಿ ಮರಳೆದ್ದಿದೆ; ನೀರಿನ ಬುಗ್ಗೆಗಳೆದ್ದಿವೆ; ಪರ್ವತಗಳೊಡೆದು ಅಡವಿಗಳನ್ನು ಮುಚ್ಚಿಬಿಟ್ಟಿವೆ. ನೇಪಾಳ ಮತ್ತು ಅಸ್ಸಾಮುಗಳಲ್ಲಿದ್ದ ಶಿಕಾರಿ ವನಗಳೀಗ ಬಂಜರು ಬಿದ್ದಿವೆ! ನೀರಿನ ಚಿಕ್ಕ ನದಿಗಳೇ ಹೊರಟು, ವನ್ಯ ಜಂತುಗಳನ್ನು ಸಾವಿರಗಟ್ಟಳೆಯಲ್ಲಿ ತೇಲಿಸಿಕೊಂಡು ಹೋಗಿವೆ. ನೂರಾರು ಮೃಗಗಳು, ಗುಡ್ಡಗಳು ಜರಿದು ಬೀಳುವಾಗ, ಮರಗಳು ಮುರಿದು ಬೀಳುವಾಗ, ಅವುಗಳಡಿಯಲ್ಲಿ ಜಜ್ಜಿ, ಹೂತುಹೋಗಿವೆ. ಉಳಿದ ಕೆಲವೇ ಮೃಗಗಳಿಗೆ ಭೀತಿಯು ನಾಟಿಕೊಂಡಿದೆ. ಅವುಗಳಗಿನ್ನು ಮನುಷ್ಯನ ಅಥವಾ ಇತರ ಸಾಧು ಪ್ರಾಣಿಗಳ ಭೇಟಿಯೇ ಬೇಡವಾದಂತಿದೆ. ಅವು "ನಮ್ಮನ್ನು ಜೀವಿಸಗೊಡಿರಿ!" ಎಂದು ದೈನ್ಯದಿಂದ ಬೇಡುತ್ತಿರುವುವೋ ಎಂಬಂತೆ, ತಮ್ಮ ಕ್ರೂರ ಸ್ವಭಾವವನ್ನು ನೀಗಿ, ಸಾಧುವಾಗಿ ಸಂಚರಿಸುತ್ತಿರುವುವು.

ಹುಲಿಗಳು ಆಹಾರಕ್ಕಾಗಿ ಹಳ್ಳಿಗಳ ಬಳಿಯಲ್ಲಿ ಸಂಚರಿಸುವುವು; ಆದರೆ ಗರ್ಜನೆಯಿಲ್ಲ. ಹಸಿದಿರುವುವಾದರೂ ಪ್ರಾಣಿಗಳ ಭೇಟಿಯಿಲ್ಲ. ಇವುಗಳನ್ನು ನೋಡಿ ಗ್ರಾಮವಾಸಿಗಳು ಈಗ ಹೆದರುವುದಿಲ್ಲ. ಭೂಕಂಪವು ತಂದುಕೊಟ್ಟ ಭೀತಿಯು ಮೃಗಗಳನ್ನೂ ಇಷ್ಟು ಆವರಿಸಬೇಕೇ! ಅದ್ಭುತವಿದು!

ಭೂಕಂಪವು ದುಃಖ-ದಾರಿದ್ರ್ಯ ಮರಣಗಳನ್ನು ತಂದಿತು. ಆದರೆ, ಅದರೊಂದಿಗೆ ಮನುಷ್ಯ ಮತ್ತು ಮೃಗಗಳೊಳಗೆ ಬಾಂಧವ್ಯವನ್ನೂ ಇದು ತಂದಿತು ಎಂದು ಜನರಾಡಿಕೊಳ್ಳುವರು. ಬಡವರನ್ನು ಕಂಡು ಕ್ರೂರ ಮೃಗಗಳೂ ಎದೆ ಕರಗಿಸಿಕೊಂಡಿವೆ!—ನಾವು?

'ಬಡವರ ಬಂಧು' ಪ್ರತಿ ತಿಂಗಳ 15ನೇ ತಾರೀಕಿಗೆ ಹೊರಡುವುದು.

ಮೆನೆಜರ್.

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta Mangalore.